MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 315 | ಶನಿವಾರ : 04-10-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 315 | SATURDAY : 04-10-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

# ದೇವರ ವಿಗ್ರಹಕ್ಕಾಗಿ ಬಡಿದಾಟ; ಇಬ್ಬರು ಸಾವು



**ಬಳ್ಳಾರಿ/ಆಂಧ್ರಪ್ರದೇಶ, ಅ. 3–** ಭಾರತ ದೇಶದಲ್ಲಿ ಆಚರಿಸುವ ಹಬ್ಬ-ಹರಿದಿನ ಒಂದೇ ಆಗಿದ್ದರೂ, ಅದನ್ನು ಆಚರಿಸುವ ವಿಧಾನಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತವೆ. ರಾಜ್ಯದ ಗಡಿ ಭಾಗವಾದ ದೇವರ ಗಟ್ಟು ಎಂಬಲ್ಲಿ ಇದರ ಆಚರಣೆ ವಿಭಿನ್ನ ಜೊತೆಗೆ ವಿಚಿತ್ರವೂ ಹೌದು. ಇಲ್ಲಿ ವಿಜಯ ದಶಮಿಯ ವೇಳೆ ದೇವರ ಉತ್ಸವ ಮೂರ್ತಿಗಾಗಿ ಗ್ರಾಮಸ್ಥರ ನಡುವೆ ಬಡಿಗೆಗಳಿಂದ ಹೊಡೆದಾಟವೇ ನಡೆಯುತ್ತದೆ.

ಇಲ್ಲಿನ ಗಡಿಭಾಗದ ಜನರು ಬನ್ನಿ ಉತ್ಸವವನ್ನು ಕೋಲಿನ ಕಾಳಗದ ಹಬ್ಬವಾಗಿ ದಶಕಗಳಿಂದಲೂ ಆಚರಿಸಿಕೊಂಡು ಬರುತ್ತಿದ್ದಾರೆ. ಕರ್ನಾಟಕ ಸೇರಿದಂತೆ ಆಂಧ್ರದ ಭಕ್ತರು ಉತ್ಸವದಲ್ಲಿ ಭಾಗಿಯಾಗುತ್ತಾರೆ.

ರಾಜ್ಯದ ಗಡಿಯಲ್ಲಿರುವ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಹೊಳಗುಂಡ್ ಮಂಡಲದ ದೇವರಗಟ್ಟು ಪ್ರದೇಶದಲ್ಲಿ, ವಿಜಯದಶಮಿಯನ್ನು ಮಲ್ಲಮ್ಮ ಮತ್ತು (2ನೇಪುಟಕ್ಕೆ)

# ಮಳೆಯಿಂದಾದ ಹಾನಿಪೀಡಿತ ಪ್ರದೇಶಗಳಿಗೆ ಶಾಸಕರಾದ ಬಸನಗೌಡ ದದ್ದಲ್ ಭೇಟಿ; ಪರಿಶೀಲನೆ

ಯುವ ಮಾರ್ಗ ಸುದ್ದಿ



**ರಾಯಚೂರು,ಅ.3–** ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಬೆಳಗ್ಗೆಯಿಂದ ಸಂಜೆವರೆಗೆ ರಾಯಚೂರು ಗ್ರಾಮೀಣ ಕ್ಷೇತ್ರದ ನಾನಾ ಪ್ರದೇಶಗಳಿಗೆ ಭೇಟಿ ನೀಡಿ ಮಳೆಯಿಂದಾದ ಹಾನಿಯ ಬಗ್ಗೆ ಪರಿಶೀಲಿಸಿದರು.

ಬೆಳಗ್ಗೆ 10.30 ರಿಂದ ಸಂಚಾರ ಆರಂಭಿಸಿ, ಚಿಕ್ಕಸೂಗುರು, ದೇವಸಗೂರು, ಚಂದ್ರಬಂಡಾ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ನಾನಾ ಪ್ರದೇಶಗಳಲ್ಲಿ ಸಂಚರಿಸಿ ಹತ್ತಿ ಸೇರಿದಂತೆ ಹಾಳಾದ ಬೇರೆ ಬೇರೆ ಬೆಳೆಗಳ ಹಾನಿಯ ಬಗ್ಗೆ ಶಾಸಕರು ಖುದ್ದು ಪರಿಶೀಲಿಸಿದರು.

ಈ ಭಾರಿ ಹತ್ತಿ ಬೆಳೆಯು ಸಂಪನ್ನವಾಗಿ ಬಂದಿತ್ತು. ಜಮೀನೊಳಗೆ ಕಾಲಿಡಲು ಆಗದಷ್ಟು ಹತ್ತಿ ಬೆಳೆ ಗಿಡಗಳು ದೊಡ್ಡದಾಗಿ ಬೆಳೆದಿದ್ದವು. ಆದರೆ, ಅತಿಯಾದ ಮಳೆಯಿಂದಾಗಿ ಜಮೀನಿನಲ್ಲಿ ನೀರು ನಿಂತು ಹತ್ತಿ ಬೆಳೆಯ ಫಸಲು ಕೈಗೆ ಸಿಗದಂತಾಗಿದೆ. ಹತ್ತಿ ಬೆಳೆಯ ಗಿಡಗಳು ಒಣಗುತ್ತಿವೆ. ಈಗಾಗಲೇ ಬಿಡಿಸಲು ಬಂದಿದ್ದ ಹತ್ತಿ ಗಿಡದಲ್ಲಿನ ಫಸಲು ಮಳೆ ನೀರಿನಿಂದ ತೊಯ್ದು ಕಪ್ಪಾಗಿದೆ. ಹತ್ತಿಯು ಅತ್ಯಂತ ಸೂಕ್ಷ್ಮ ಬೆಳೆಯಾಗಿದ್ದರಿಂದ ಹತ್ತಿ ಗಿಡದಲ್ಲಿನ ಎಲ್ಲ ಹಸಿರು ಕಾಯಿಗಳಿಗೂ ಮಳೆ ನೀರು ಸೇರಿ ಹಸಿರು ಕಾಯಿಯೊಳಗಿನ ಫಸಲು ಸಹ ಕೊಳೆತಿದೆ. ರೈತರಿಗೆ ಭಾರಿ ಅನ್ಯಾಯವಾಗಿದೆ. ನಮಗೆ ಸಮರ್ಪಕ ಪರಿಹಾರ ಕೊಡಿಸಬೇಕು. ತೊಗರಿ, ಜೋಳ ಸೇರಿದಂತೆ ಬೇರೆ ಬೇರೆ ಬೆಳೆಗಳಿಗು ಸಹ ಹಾನಿಯಾಗಿದೆ. ನಮಗೆ ಸಮರ್ಪಕ ಪರಿಹಾರ ಕೊಡಿಸಬೇಕು ಎಂದು ಇದೆ ವೇಳೆ ರೈತರು ಶಾಸಕರಲ್ಲಿ (2ನೇಪುಟಕ್ಕೆ)

# ಬೆಳೆಹಾನಿ ಪ್ರದೇಶಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ : ಪರಿಶೀಲನೆ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ಅ.3–**ತಾಲೂಕಿನಲ್ಲಿ ಅತಿವೃಷ್ಠಿಯಿಂದ ಆದ ಬೆಳೆಹಾನಿ ಪ್ರದೇಶಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ್ದ ಸೂರ್ಯಕಾಂತಿ, ದತ್ತಿ, ತೊಗರಿ, ಮೆಣಸಿನಕಾಯಿ ಸೇರಿ ನಾನಾ ಬೆಳೆಗಳು ಕೈಗೆ ಬರುವ ಹಂತದಲ್ಲಿ ಅತಿವೃಷ್ಠಿಗೆ ಬಲಿಯಾಗಿ ಕೊಳೆತುಹೋಗಿವೆ. ತಾಲೂಕಿನ ಲಕ್ಷಾಂತರ ಹೆಕ್ಟೇರ್‌ನಲ್ಲಿ ಬೆಳೆ ನಾಶವಾಗಿ ರೈತರು ಸಂಕಷ್ಟಕ್ಕೆ ಸಿಲುಕಿರುವುದು ಮೇಲನ್ನೋಟಕ್ಕೆ ಕಾಣಿಸುತ್ತಿದೆ. ಕೂಡಲೇ ಬೆಳೆದಾನಿ ಸಮೀಕ್ಷೆ ನಡೆಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ರೈತಾಪಿ ವರ್ಗದ ಜೊತೆಗೆ ಸರಕಾರವಿದೆ. ರೈತರು ಎದೆಗುಂದದೇ ಧೈರ್ಯವಾಗಿರಬೇಕು. ಬೆಳೆನಾಶದ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವದು. ಎಂದು ಸಚಿವರು ಭರವಸೆ ನೀಡಿದರು.

ತಾಲೂಕಿನ ಮೇದಿನಾಪೂರ, ಯರಡೋಣ, ಹೊನ್ನದಳ್ಳಿ ಯಲಗಲದಿನ್ನಿ ಸೀಮೆಯ ಜಮೀನುಗಳಲ್ಲಿ ಬೆಳೆ ನಾಶವಾಗಿರುವದನ್ನು ವೀಕ್ಷಣೆ ಮಾಡಿದರು.

ಈ ಸಂದರ್ಭದಲ್ಲಿ ಶಾಸಕ ಮಾನಪ್ಪ ವಜ್ಜಲ್, ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪೂರ, ಜಿಲ್ಲಾಧಿಕಾರಿ ನಿತಿಶ್ ಕುಮಾರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ, ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲಶೆಟ್ಟಿ ತಹಸೀಲ್ದಾರ್ ಸತ್ಯಮ್ಮ, ಕೃಷಿ ಅಧಿಕಾರಿ ಮಲ್ಲಿಕಾರ್ಜುನ ನಾಗರದಾಳ, ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿದಾಳ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ, ಬಿಜೆಪಿ ಅಧ್ಯಕ್ಷ ಕೆ.ನಾಗಭೂಷಣ ಸೇರಿ ಅಧಿಕಾರಿಗಳು, ಮುಖಂಡರು, ರೈತರು ಇದ್ದರು.

# ಮಾನ್ವಿ: ಭಾರಿ ಮಳೆಯಿಂದ ಹಾನಿಗೊಳಗಾದ ಬೆಳೆ ಪ್ರದೇಶಗಳಿಗೆ ಸಚಿವರು, ಶಾಸಕರಿಂದ ಭೇಟಿ

ಯುವ ಮಾರ್ಗ ಸುದ್ದಿ



**ಮಾನ್ವಿ,ಅ.3–** ಕಳೆದ ವಾರ ಸುರಿದ ಭಾರಿ ಮಳೆಯಿಂದಾಗಿ ಹಾನಿಗೊಳಗಾದ ಹತ್ತಿ ಮತ್ತು ಭತ್ತದ ಬೆಳೆ ಪ್ರದೇಶಗಳಿಗೆ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ್ ಮತ್ತು ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅವರು ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಿರೇಕೊಟ್ನೆಕಲ್ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಕೊಟ್ನೆಕಲ್ ಗ್ರಾಮದಲ್ಲಿ ಹಾಗೂ ನಿರಾವಾನ್ನಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ನೀರಮಾನ್ವಿ ಕ್ಯಾಂಪ್ ಹತ್ತಿರ ಬೆಳೆ ಹಾನಿ ಸಂಭವಿಸಿದ್ದು, ಸಚಿವರು ಮತ್ತು ಶಾಸಕರು ನಷ್ಟವಾಗಿರುವ ಹೊಲಗಳಿಗೆ ಭೇಟಿ ನೀಡಿ ರೈತರಿಂದ ಮಾಹಿತಿ ಪಡೆದರು. ಮಳೆಯಿಂದಾಗಿ ಹತ್ತಿ ಮತ್ತು ಭತ್ತದ ಬೆಳೆಗಳು ಸಂಪೂರ್ಣ ನಾಶವಾಗಿರುವುದನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ರೈತರಿಗೆ ಸೂಕ್ತ ಪರಿಹಾರ ಒದಗಿಸುವ ಭರವಸೆ ನೀಡಿದರು ಎಂದು ತಿಳಿದು ಬಂದಿದೆ.

ಬೆಳೆ ಹಾನಿ ಪ್ರದೇಶಗಳ ಪರಿಶೀಲನೆ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫುರ್ ಸಾಬ್, ಪಂಚ ಗ್ಯಾರಂಟಿಗಳ ಅಧ್ಯಕ್ಷರಾದ ಬಿ.ಕೆ. ಅಮರೇಶಪ್ಪ ವಕೀಲರು, ಬಸವರಾಜ್ ಮಾಲಿ ಪಾಟೀಲ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಗುಂಡಮ್ಮ ವಕೀಲರು, ಬಾಗಲವಾಡ ತಿಪ್ಪಣ್ಣ ವಕೀಲರು, ಸತ್ಯನಾರಾಯಣ ಅಮರೇಶ್ವರ ಕ್ಯಾಂಪ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಕಿರಲಿಂಗಪ್ಪ ಕವಿತಾಳ, ಗ್ರಾಮದ ರೈತರು ಹಾಗೂ ಸ್ಥಳೀಯ ಮುಖಂಡರುಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು

# ಅ.5 ರಂದು ಹಜರತ್ ಸೈಯದ್ ಷಾ ಮುರ್ತುಜಾ ಖಾದ್ರಿ ಉರುಸ್: ಸೈಯದ್ ಇರ್ಫಾನ್ ಖಾದ್ರಿ ಗುರು



ಯುವ ಮಾರ್ಗ ಸುದ್ದಿ

**ಮಾನ್ವಿ,ಅ.3–** ತಾಲೂಕಿನ ಐತಿಹಾಸಿಕ ಸುಪ್ರಸಿದ್ಧ ಬಡೇಸಾಹೇಬ್ ದರ್ಗಾ ಹಜರತ್ ಸೈಯದ ಷಾ ಮುರ್ತುಜಾ ಖಾದ್ರಿ (ರ.ಅ.) ಅ.5 ರವಿವಾರ ಉರುಸ್ (ಉರ್ಸೆ ಶರೀಫ್) ಅತ್ಯಂತ ಶ್ರದ್ಧಾ ಭಕ್ತಿಯಿಂದ ಜರುಗಲಿದೆ ಎಂದು ದರ್ಗಾದ ಪೀಠಾಧ್ಯಕ್ಷರಾದ ಸೈಯದ್ ಇರ್ಫಾನ್ ಖಾದ್ರಿ ಗುರು ತಿಳಿಸಿದರು.

ಪಟ್ಟಣದ ಜುಮ್ಮಲದೊಡ್ಡಿ ದರ್ಗಾದ ಬಳಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಅ. 4 ರಂದು ಶನಿವಾರ ರಾತ್ರಿ 8.30 ಕ್ಕೆ ಸಂಧಲ್ (ಗಂಧ) ಹಜರತ್ ಸೈಯದ್ ಷಾ ಮುರ್ತುಜಾ ಖಾದ್ರಿ ದರ್ಗಾದಿಂದ ಟಿಪ್ಪುಸುಲ್ತಾನ ಚೌಕ್ ಹತ್ತಿರದ ಜಾಮೀಯಾ ಮಸ್ಜಿದ್ ತೆರಳಿ ಫತೇಹ್ ಖಾನು (ಪ್ರಾರ್ಥನೆ) ಸಲ್ಲಿಸಿ ಪುನಃ ದರ್ಗಾಕ್ಕೆ ಬದಲಾಗುತ್ತದೆ. ಅ.5. ರಂದು ರವಿವಾರ ಮಧ್ಯಾಹ್ನ 2.30 ಕ್ಕೆ ಉರುಸ್ ಮತ್ತು ಅ.6 ರಂದು ಸೋಮವಾರ ಜಿಯಾರಾತ್ ಸಂಜೆ 5.ಕ್ಕೆ ನಡೆಯುವ ಗ್ಯಾರವಿ ಶರೀಫ್ ದಿನಾಚರಣೆ ಅಂಗವಾಗಿ ಪಟ್ಟಣದ ಎಲ್ಲಾ ವಾರ್ಡುಗಳಿಂದ ಧ್ವಜಗಳ ಮೆರವಣಿಗೆ ಜರುಗಿ ನಂತರ ದರ್ಗಾ ಬಳಿ ಧ್ವಜ ಸ್ಥಾಪನೆ ಕಾರ್ಯ ನಡೆಯಲಿದೆ ಎಂದು ತಿಳಿಸಿದರು. ಸುಮಾರು 600 ವರ್ಷಗಳ ಸುಧೀರ್ಘ ಇತಿಹಾಸ ಹೊಂದಿರುವ ಬಡೇಸಾಹೇಬ್ ದರ್ಗಾದ ಹಜರತ್ ಸೈಯದ್ ಷಾ ಮುರ್ತುಜಾ ಖಾದ್ರಿ ಸೂಫಿ ಸಂತರ ಸಾಲಿಗೆ ಸೇರಿದವರಾಗಿದ್ದಾರೆ. ಇವರ ದರ್ಶನಕ್ಕಾಗಿ ಜಿಲ್ಲೆಯ ಮಾತ್ರವಲ್ಲದೆ ಆಂಧ್ರಪ್ರದೇಶದಿಂದ ಅನೇಕ ಭಕ್ತರು ಆಗಮಿಸಿ ಆಶೀರ್ವಾದ ಪಡೆಯಲಿದ್ದಾರೆ ಎಂದು ಸೈಯದ್ ಇರ್ಫಾನ್ ಖಾದ್ರಿ ಗುರು ಹೇಳಿದರು. ಅ. 4 ರಿಂದ 6 ರವರಗೆ ನಡೆಯುವ ಎಲ್ಲಾ ಭಕ್ತಿಪೂರ್ವಕ ಗಂಧ ಮತ್ತು ಉರುಸು, ಜಿಯಾರತ್ ಕಾರ್ಯಕ್ರಮಗಳಲ್ಲಿ ಸರ್ವ ಭಕ್ತಾದಿಗಳೆಲ್ಲಾ ಭಾಗವಹಿಸಿ ಹಜರತ್ ಸೈಯದ ಷಾ ಮುರ್ತುಜಾ ಖಾದ್ರಿ (ರ.ಅ.)ರವರ ಕೃಪೆಗೆ ಪಾತ್ರರಾಗಬೇಕಾಗಿ ಎಂದು ಜುಮ್ಮಲದೊಡ್ಡಿ ಕೋನಾಪೂರುಪೇಟೆಯ ಖಾದ್ರಿ ಸಹೋದರರು ಅಹ್ಲೆ ಸುನ್ನತ್ ವಲ್ ಜಮಾತ್ ಮಾನ್ವಿ ಸರ್ವರಿಗೂ ಆದರದ ಸ್ವಾಗತ ಕೋರಿದ್ದಾರೆ.ಈ ಸಂದರ್ಭದಲ್ಲಿ ಸೈಯದ್ ಸಜ್ಜಾದ್ ಹುಸೇನ್ ಮತವಾಲೆ ಗುರು, ಸಾಜಿದ್ ಖಾದ್ರಿ, ಸೈಯದ್ ಅಬೀದ್ ಖಾದ್ರಿ ಗುರು, ಸೈಯದ್ ಖಾಲಿದ್ ಖಾದ್ರಿ ಗುರು, ಅಮ್ಜದ್ ಜಾಗೀರದಾರ, ಸೈಯದ್ ಮುಸ್ತಫಾ ಖಾದ್ರಿ ಗುರು, ಸೈಯದ್ ಆರೀಫ್ ಖಾದ್ರಿ ಗುರು, ಸೈಯದ್ ವಸೀಂ ಖಾದ್ರಿ ಗುರು, ಸೈಯದ್ ನಾಸೀರ್ ಖಾದ್ರಿ, ಜಬ್ಬಾರಸಾಬ್ ಕುರ್ಡಿ, ಶಾಮೀದ್ ಬೇಗ್, ಮೌಲಾಸಾಬ್ ಕಂಟಾಲಿ, ಸೈಯದ್ ಚಾಂದ್ ಜಾಗೀರದಾರ ಸೇರಿದಂತೆ ಇನ್ನಿತರರಿದ್ದರು.

# ರಾಯಚೂರಲ್ಲಿ ದಸರಾ ಸಂಭ್ರಮ: ಮಹಾನಗರ ಪಾಲಿಕೆಯಿಂದ ವಿಶಿಷ್ಟವಾಗಿ ನಡೆದ ನಾಡದೇವಿ ಮೆರವಣಿಗೆ

ಯುವ ಮಾರ್ಗ ಸುದ್ದಿ



**ರಾಯಚೂರು,ಅ.3–**ರಾಯಚೂರು ಮಹಾನಗರ ಪಾಲಿಕೆಯಿಂದ ನಾಡ ಹಬ್ಬ ದಸರಾ ಹಿನ್ನೆಲೆಯಲ್ಲಿ ನಾಡದೇವಿಯ ಮೆರವಣಿಗೆಯು ನಗರದಲ್ಲಿ ಅಕ್ಟೋಬರ್ 2ರಂದು ವಿಶಿಷ್ಟವಾಗಿ ನಡೆಯಿತು.

ಮಹಾನಗರ ಪಾಲಿಕೆಯ ಜೋನಲ್ ಕಚೇರಿ ಆವರಣದಲ್ಲಿ ಮೆರವಣಿಗೆಗೆ ಚಾಲನೆ ದೊರೆಯಿತು. ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್ ಶಿವರಾಜ್ ಪಾಟೀಲ, ಮಹಾನಗರ ಪಾಲಿಕೆಯ ಅಧ್ಯಕ್ಷೆ ನರಸಮ್ಮ ನರಸಿಂಹಲು ಮಾಡಗಿರಿ, ಉಪಾಧ್ಯಕ್ಷರಾದ ಜೆ ಸಾಜಿದ್ ಸಮೀರ್ ಹಾಗೂ ಪಾಲಿಕೆಯ ಇನ್ನಿತರ ಸದಸ್ಯರು ಮತ್ತು ಪಾಲಿಕೆಯು ಆಯುಕ್ತರಾದ ಜುಬಿನ್ ಮೊಹಪಾತ್ರ ಹಾಗೂ ಇನ್ನಿತರ ಗಣ್ಯರು ತಲೆಗೆ ಪೇಟ ಸುತ್ತಿ ಭಾಗಿಯಾಗಿ ದಸರಾ ಮಹೋತ್ಸವದ ಸಂಭ್ರಮಕ್ಕೆ ಸಾಕ್ಷಿಯಾದರು.

ಮಹಿಳೆಯರು ಕುಂಭಹೊತ್ತು ಮೆರವಣಿಗೆಯಲ್ಲಿ ಸಾಗಿದರು. ಹಲಗೆ-ಡೊಳ್ಳಿನ ಮೇಳ, ಕೋಲಾಟ, ಹುಲಿಕುಣಿತ ವೇಷಧಾರಿಗಳು ಸೇರಿದಂತೆ ನಾನಾ ಬಗೆಯ ಕಲಾ ತಂಡಗಳು ಮೆರವಣಿಗೆಯ ಕಳೆ ಹೆಚ್ಚಿಸಿದವು.

ಮಹಾನಗರ ಪಾಲಿಕೆಯ ಜೋನಲ್ ಕಚೇರಿಯಿಂದ ಆರಂಭಗೊಂಡ ನಾಡ ದೇವಿಯ ಮೆರವಣಿಗೆಯು ಮಾಣಿಕಪ್ರಭು ಬನ್ನಿ ಮಂಟಪದವರೆಗೆ ಸಾಗಿತು.

ಮೆರವಣಿಗೆಯಲ್ಲಿ ಪಾಲಿಕೆಯ ಸದಸ್ಯರಾದ ಲಕ್ಷ್ಮೀ, ಡಿ.ಎ ಸಿಮನ್, ಜಯಣ್ಣ, ವಿ.ನಾಗರಾಟ, ಬಿ.ರಮೇಶ, ಶರಣಬಸಪ್ಪ ಬಲ್ಲಟಗಿ, ಬುಜ್ಜಮ್ಮ ಶಂಕರಪ್ಪ, ಅನಿತಾ ಜಿ.ತಿಮ್ಮಾರೆಡ್ಡಿ, ನಿಮಿತ್ ಸಲ್ಯಾ ಮಹ್ಮದ್ ಶಾಲಂ, ಖುರ್ಷಿದಾ ಬಾನು ಅಬ್ದುಲ್ ವಾಹಿದ್, ದರೂರ ಬಸವರಾಜ ಪಾಟೀಲ್, ರತ್ನ ಪ್ರಶಾಂತಿ, ಎಂ ಪವನ್ ಕುಮಾರ ಎಂ.ಈರಣ್ಣ, ಉಮಾ ರವೀಂದ್ರ ಜಲ್ದಾರ, ನೂರ ಪಾಷಾ ಎಸ್, ಗಾಯತ್ರಿ ಹರೀಶ ನಾಡಗೌಡ, ಈ ಶಶಿರಾಜ, ಲಂತಾ ಕಡಗೋಲ್ ಅಂಜಿನಯ್ಯ, ಹೇಮಲತಾ ಪಿ.ಬೂದೆಪ್ಪ, ಎನ್.ಕೆ. ನಾಗರಾಜ, ಜಿಂದಪ್ಪ, ಸರೋಜಮ್ಮ ದೊಡ್ಡ ಮಲ್ಲೇಶಪ್ಪ, ಎನ್. ಶ್ರೀನಿವಾಸರೆಡ್ಡಿ, ರೇಖಾ ಮಹೇಂದ್ರರೆಡ್ಡಿ, ಶೈನಾಜ್ ಬೇಗಂ ಜಿ.ಹೆಚ್.ಪಾಜಿಬಾಬು, ಪಿ.ನವನೀತಾ ಪಿ. ಶ್ರೀನಿವಾಸ ರೆಡ್ಡಿ, ಕವಿತಾ ಜಿ. ತಿಮ್ಮಾರೆಡ್ಡಿ, ಸುನೀಲ್ ಕುಮಾರ್, ವೆಂಕಟಮ್ಮ ಎನ್. ಶ್ರೀನಿವಾಸರೆಡ್ಡಿ, ಅಂಜನಮ್ಮ ಶ್ಯಾಮಸುಂದರ್, ಸಮೀನಾ ಮುಕ್ರಂ, ಸಣ್ಣ ನರಸರೆಡ್ಡಿ, ತಿಮ್ಮಪ್ಪ ನಾಗೇಂದ್ರಪ್ಪ, ಸ್ವಾತಿ ಹರಿಬಾಬು, ನಾಮ ನಿರ್ದೇಶಿತ ಸದಸ್ಯರಾದ ಮಹ್ಮದ್ ಫೆರೋಜ್, ವೆಂಕಟೇಶ, ಅಮಿತ್ ಕುಮಾರ ಲೋಧ, ಮಣಿಕಂಠ, ಮುನಿಸ್ವಾಮಿ ಹಾಗೂ ಮುಖಂಡರಾದ ರವಿ ಬೋಸರಾಜು, ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತರಾದ ಶರಣಬಸಪ್ಪ ಕೋಟೆಪ್ಪಗೋಳ, ಆಡಳಿತ ವಿಭಾಗದ ಉಪ ಆಯುಕ್ತರಾದ ಸಂತೋಷರಾಣಿ ಎಂ., ಅಭಿವೃದ್ಧಿ ವಿಭಾಗದ ಉಪ ಆಯುಕ್ತರಾದ ಮೇನಕಾ ಪಟೇಲ್ ಹಾಗೂ ಇನ್ನಿತರರು ಭಾಗಿಯಾಗಿದ್ದರು.

## ಮೊದಲನೇಯ ಪುಟದಿಂದ

## ಮಳೆಯಿಂದಾದ ಹಾನಿಪೀಡಿತ ಪ್ರದೇಶಗಳಿಗೆ ಶಾಸಕರಾದ ಬಸನಗೌಡ ದದ್ದಲ್ ಭೇಟಿ; ಪರಿಶೀಲನೆ

ಮನವಿ ಮಾಡಿದರು. ಸರ್ಕಾರಕ್ಕೆ ವರದಿ: ರಾಯಚೂರು ಗ್ರಾಮೀಣ ಕ್ಷೇತ್ರದಲ್ಲಿ ಬಹುತೇಕ ರೈತರು ಹತ್ತಿ ಬೆಳೆ ಬೆಳೆದಿದ್ದಾರೆ. ಒಂದು ಬಾರಿಯಾದರು ಹತ್ತಿ ಬಿಡಿಸದೇ ಇರುವಂತಹ ಸಂದರ್ಭದಲ್ಲಿ ಮಳೆ ಸುರಿದು ಮತ್ತು ಕೃಷ್ಣಾ ಹಾಗೂ ತುಂಗಾ ನದಿಗಳು ಉಕ್ಕಿ ಹರಿದು, ಹಳ್ಳ ಕೊಳ್ಳಗಳ ತುಂಬಿ ಜಮೀನಿಗೆ ನೀರು ನುಗ್ಗಿ ಫಸಲಿಗೆ ಹಾನಿಯಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಇನ್ನು ಒಡೆಯದೇ ಇರುವ ಕಾಯಿಗಳು ಸಹ ಕೊಳೆತಿವೆ. ಇರುವ ಕಾಯಿಗಳು ಉದುರುತ್ತಿವೆ. ತಹಸೀಲ್ದಾರರು, ಕೃಷಿ, ತೋಟಗಾರಿಕಾ ಇಲಾಖೆ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಗ್ರಾಮ ಸಹಾಯಕರು ಸೇರಿದಂತೆ ಬೇರೆ ಬೇರೆ ಅಧಿಕಾರಿಗಳು ನಿರಂತರ ಕಾಲ ಅತಿವೃಷ್ಟಿಯಿಂದಾದ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಜಂಟಿ ಸಮೀಕ್ಷಾ ಕಾರ್ಯ ಆರಂಭಿಸಿದ್ದಾರೆ. ಈ ಬೆಳೆಹಾನಿಗೆ ಸಮರ್ಪಕ ಪರಿಹಾರವು ರೈತರಿಗೆ ಸಿಗಬೇಕು ಎಂದು ಜಿಲ್ಲಾಧಿಕಾರಿಗಳ ಮೂಲಕ ವರದಿಯನ್ನು ಸರ್ಕಾರಕ್ಕೆ ಕಳುಹಿಸುತ್ತಿದ್ದೇವೆ ಎಂದು ಶಾಸಕರು ರೈತರಿಗೆ ತಿಳಿಸಿದರು.

ರೈತರಿಗೆ ಸಹಾಯ ಮಾಡುವುದು ಆದ್ಯ ಕರ್ತವ್ಯ: ಅಂದಾಜು 6 ಸಾವಿರ ಎಕರೆ ಪ್ರದೇಶದಲ್ಲಿನ ಬೆಳೆಗೆ ಹಾನಿಯಾಗಿದೆ ಎಂದು ಈಗ ಮೊದಲ ಹಂತದಲ್ಲಿ ಅಂದಾಜಿಸಲಾಗಿದೆ. ಇನ್ನೂ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು ಪ್ರತಿ ಎರಡು ಮೂರು ದಿನಗಳಿಗೊಮ್ಮೆ ತಾಲೂಕು ತಹಸೀಲ್ದಾರರು ಜಿಲ್ಲಾಧಿಕಾರಿಗಳ ಕಚೇರಿಗೆ ಬೆಳೆಹಾನಿಯ ಪ್ರಮಾಣದ ಬಗ್ಗೆ ವರದಿ ಮಾಡುತ್ತಿದ್ದಾರೆ. ಹಾನಿಗೊಳಗಾದ ಪ್ರದೇಶದ ಪ್ರಮಾಣ ಇನ್ನು ಹೆಚ್ಚಾಗಲಿದೆ ಎಂದ ಶಾಸಕರು, ಈ ಬಾರಿ ನಮ್ಮ ತಾಲೂಕಿನಲ್ಲಿ ಬಂಪರ್ ಬೆಳೆ ಬಂದಿತ್ತು. ಪ್ರಕೃತಿ ವಿಕೋಪಗಳುಂಟಾದಾಗ ಈ ರೀತಿ ಹಾನಿಯಾಗುತ್ತದೆ. ರೈತರಿಗೆ ಸಹಾಯ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಫ್ ಮಾರ್ಗಸೂಚಿ ಪ್ರಕಾರ ರೈತರಿಗೆ ಸೂಕ್ತ ಪರಿಹಾರ ಒದಗಿಸುತ್ತೇವೆ. ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರು ಕಲಬುರಗಿ ಜಿಲ್ಲೆಯಲ್ಲಿ ಹೇಳಿದಂತೆ ರೈತರಿಗೆ ಎನ್‌ಡಿಆರ್‌ಫ್ ಮಾರ್ಗಸೂಚಿಯ ಪರಿಹಾರ ಧನದ ಜೊತೆಗೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹ ಧನ ಕೊಡುವ ಬಗ್ಗೆ ಸರ್ಕಾರದಿಂದ ಆದೇಶವಾಗಲಿದೆ. ರೈತರು ಧೈರ್ಯದಿಂದ ಇರಬೇಕು ಎಂದು ಶಾಸಕರು ರೈತರಿಗೆ ಧೈರ್ಯ ತುಂಬಿದರು.

ಅಧಿಕಾರಿಗಳಿಗೆ ಸೂಚನೆ: ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಸೇರಿದಂತೆ ರಾಯಚೂರು ತಾಲೂಕುಮಟ್ಟದ ಕೃಷಿ, ತೋಟಗಾರಿಕೆ, ಕಂದಾಯ ಸೇರಿದಂತೆ ವಿವಿಧ ಇಲಾಖೆಗಳ ಎಲ್ಲ ಅಧಿಕಾರಿಗಳು ಈ ಸಂದರ್ಭದಲ್ಲಿ ಜಾಗೃತೆಯಿಂದ ಕೆಲಸ ಮಾಡಬೇಕು. ಪ್ರತಿಯೊಬ್ಬರು ರೈತರ ಬೇಡಿಕೆಗಳಿಗೆ ಸ್ಪಂದನೆ ನೀಡಬೇಕು. ಸಮೀಕ್ಷೆ ಅಚ್ಚುಕಟ್ಟಾಗಿ ನಡೆಯಬೇಕು. ಹಾನಿಗೊಳದ ಎಲ್ಲ ರೈತರಿಗೂ ನ್ಯಾಯ ಸಿಗಬೇಕು. ಎಲ್ಲ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಬೇಕು. ನಮ್ಮಲ್ಲಿ ಸಮೀಕ್ಷೆ ನಡೆಸಲು ಯಾರು ಬಂದಿಲ್ಲ ಎಂದು ಯಾವ ರೈತರು ದೂರು ನೀಡದಂತೆ ಅಧಿಕಾರಿಗಳು ಜಾಗೃತೆಯಿಂದ ಕೆಲಸ ಮಾಡಬೇಕು. ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆಯ ಅಧಿಕಾರಿಗಳು ಈ ಸಂದರ್ಭದಲ್ಲಿ ಕೇಂದ್ರ ಸ್ಥಾನದಲ್ಲಿದ್ದು ಕಾರ್ಯ ನಿರ್ವಹಿಸಬೇಕು ಎಂದು ಇದೆ ವೇಳೆ ಶಾಸಕರು ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ರೋಗಾಭಾದೆ: ಅತಿಯಾದ ಮಳೆಯ ಜೊತೆಗೆ ರೋಗಬಾಧೆಯಿಂದಲೂ ಹತ್ತಿ ಬೆಳೆಗೆ ಹಾನಿಯಾಗಿದೆ ಎಂದು ಕೃಷಿ ಅಧಿಕಾರಿಗಳು ಇದೆ ವೇಳೆ ಶಾಸಕರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ ಸುರೇಶ ವರ್ಮಾ, ಕೃಷಿ ಅಧಿಕಾರಿ ದೀಪಾ, ತೋಟಗಾರಿಕಾ ಅಧಿಕಾರಿ ಸೇರಿದಂತೆ ಸ್ಥಳೀಯ ಮುಖಂಡರು ಹಾಗೂ ವಿವಿಧ ಗ್ರಾಮಸ್ಥರು ಮತ್ತು ಇನ್ನೀತರರು ಇದ್ದರು.

# ದೇವರ ವಿಗ್ರಹಕ್ಕಾಗಿ ಬಡಿದಾಟ; ಇಬ್ಬರು ಸಾವು

ಮಲ್ಲೇಶ್ವರ ಸ್ವಾಮಿಯ ವಿವಾಹ ಹಬ್ಬವಾಗಿ ಆಚರಿಸಲಾಗುತ್ತದೆ. ಆಂಧ್ರಪ್ರದೇಶದ ನೆರನಕಿ ಗ್ರಾಮದ ಮೀಸಲು ಅರಣ್ಯ ಪ್ರದೇಶದಲ್ಲಿ ನಡೆಯುವ ಕಲ್ಯಾಣೋತ್ಸವದ ನಂತರ, ದೇವರ ವಿಗ್ರಹವನ್ನು ಪಾದಯಗಟ್ಟು, ರಾಕ್ಷಸಪದ, ಶಮಿವೃಕ್ಷ ಮತ್ತು ಉತ್ತುಬಸವನ ದೇವಾಲಯದ ಮೂಲಕ ಮೆರವಣಿಗೆಯಲ್ಲಿ ಕರೆದೊಯ್ಯಲಾಗುತ್ತದೆ.

ಮೆರವಣಿಗೆಯ ಸಮಯದಲ್ಲಿ, ಸುತ್ತಮುತ್ತಲಿನ ಗ್ರಾಮಸ್ಥರು ಉತ್ಸವ ಮೂರ್ತಿಗಳನ್ನು ತಮ್ಮ ಹಳ್ಳಿಗಳಿಗೆ ಹಿಂತಿರುಗಿ ಒಯ್ಯಲು ಪ್ರಯತ್ನಿಸುತ್ತಾರೆ. ವಿಗ್ರಹಗಳನ್ನು ವಶಪಡಿಸಿಕೊಳ್ಳಲು ಎರಡು ಗುಂಪುಗಳು ಕೋಲುಗಳಿಂದ ಪರಸ್ಪರ ದಾಳಿ ಮಾಡುತ್ತವೆ. ಒಂದು ಗುಂಪಿನಲ್ಲಿ ನೆರನಕಿ, ನೆರನಕಿತಾಂಡ ಮತ್ತು ಕೊಥಪೇಟ ಗ್ರಾಮಗಳ ಜನರು ಸೇರಿದ್ದಾರೆ,ಇನ್ನೊಂದು ಗುಂಪಿನಲ್ಲಿ ಅರಿಕೇರಾ, ಸುಲುವೈ, ಕರಕಥಿ, ಬಿಲೆಹಾಲ್, ನಿದ್ರಾವಟ್ಟಿ ಮತ್ತು ಆಲೂರು ಗ್ರಾಮಗಳ ಜನರು ಸೇರಿದ್ದಾರೆ. ಇದನ್ನು ಸ್ಥಳೀಯವಾಗಿ ಬನ್ನಿ ಉತ್ಸವ ಅಥವಾ ದೇವರಗಟ್ಟು ಕರ್ರಲ ಸಮರಂ ಎಂದು ಕರೆಯಲಾಗುತ್ತದೆ. ಈ ಬಡಿದಾಟ ಬೆಳಗಿನ ಜಾವ 1 ರಿಂದ 3 ರವರೆಗೆ ನಡೆಯುತ್ತದೆ. ಈ ಗುಡ್ಡಗಾಡು ಪ್ರದೇಶದ ಸಾವಿರಾರು ಜನರು ವೀಕ್ಷಿಸಲು ಮತ್ತು ಭಾಗವಹಿಸಲು ಸೇರುತ್ತಾರೆ.ನಿಷೇಧದ ಹೊರತಾಗಿಯೂ ಆಚರಣೆಗಳು ಮುಂದುವರೆದಿವೆ, ಇಬ್ಬರು ಸಾವನ್ನಪ್ಪಿದ್ದಾರೆ, 100 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ: ಪ್ರತಿ ವರ್ಷದಂತೆ, ಹಬ್ಬದ ಸಮಯದಲ್ಲಿ ಹಿಂಸಾಚಾರವನ್ನು ತಡೆಗಟ್ಟಲು ಜಿಲ್ಲಾಡಳಿತ ಕ್ರಮಗಳನ್ನು ತೆಗೆದುಕೊಂಡಿದೆ. ಸುಮಾರು 700 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ದೇವರಗಟ್ಟು ಸುತ್ತಮುತ್ತ ಸಿಸಿಟಿವಿ ಕ್ಯಾಮೆರಾಗಳು ಮತ್ತು ಡ್ರೋನ್ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಆದರೆ ಎಲ್ಲಾ ಮುನ್ನೆಚ್ಚರಿಕೆಗಳು ವಿಫಲವಾದವು. ಎರಡು ಗುಂಪುಗಳ ನಡುವಿನ ಘರ್ಷಣೆಯಲ್ಲಿ ಇಬ್ಬರು ಸಾವನ್ನಪ್ಪಿದರು ಮತ್ತು ಐದು ಜನರ ಸ್ಥಿತಿ ಗಂಭೀರವಾಗಿದೆ. ನೂರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ದೇವರಗಟ್ಟು ಕರ್ರಲ ಸಮರಂ ಎಂಬುದು ಹಲವು ವರ್ಷಗಳಿಂದ ನಡೆಯುತ್ತಿರುವ ಸಾಂಪ್ರದಾಯಿಕ ಹಬ್ಬವಾಗಿದೆ.

## ಶರಣರು ಪ್ರತಿಪಾದಿಸಿದ ಸಂಸ್ಕಾರ ಮೈಗೂಡಿಸಿಕೊಳ್ಳಿ ;ನಿವೃತ್ತ ತಹಸೀಲ್ದಾರ ವೆಂಕನಗೌಡ



**ಯುವ ಮಾರ್ಗ ಸುದ್ದಿ**

**ಅರಕೇರಾ,ಅ.3–** ನಮ್ಮ ಭವ್ಯ ಪರಂಪರೆಯಲ್ಲಿ ಆಗಿ ಹೋದ ಶಿವಶರಣರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಸದಾ ಮುನ್ನಡೆಯಿರಿ. ಶರಣರು ಪ್ರತಿಪಾದಿಸಿದ ಸಂಸ್ಕಾರ, ಸಂಸ್ಕೃತಿ ಇಂದಿನ ಮಕ್ಕಳಿಗೆ ಪಾಲಕರು, ತಾಯಂದಿರು ಉಣ ಬಡಿಸಿದಲ್ಲಿ ಅವರು ದೇಶದ ಉತ್ತಮ ಪ್ರಜೆಗಳಾಗಿ ಹೊರ ಹೊಮ್ಮಲು ಸಾಧ್ಯ ಎಂದು ನಿವೃತ್ತ ತಹಸೀಲ್ದಾರ ವೆಂಕನಗೌಡ ಪಾಟೀಲ್ ನವೀಲಗುಡ್ಡ ತಿಳಿಸಿದರು.

ತಾಲ್ಲೂಕಿನ ಮದರಕಲ್ ಗ್ರಾಮದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಂಭಾದೇವಿ ದಸರಾ ಮಹೋತ್ಸವದ ಅಂಗವಾಗಿ ಮರಿ ಬನ್ನಿ ಹಾಗೂ 501 ಜನ ಸುಮಂಗಲಿಯರಿಗೆ ಉಡಿ ತುಂಬುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಚನ ಸಾಹಿತ್ಯದ ರಕ್ಷಣೆಗೆ ಉಳವಿಗೆ ಪಾದಯಾತ್ರೆ ಮೂಲಕ ಹೋಗುವಾಗ ಚನ್ನಬಸವಣ್ಣನವರು ಇಲ್ಲಿ ಲಿಂಗಪೂಜೆ ಮಾಡಿ ಕೊಂಡ ಪವಿತ್ರ ನೆಲವಿದು.ಇಂತಹ ಪುಣ್ಯಕ್ಷೇತ್ರದ ಜನರು ಶರಣರ ಸನ್ಮಾರ್ಗದಲ್ಲಿ ನಡೆಯಿರಿ ಎಂದರು.

ದಿವ್ಯ ಸಾನಿದ್ಯ ವಹಿಸಿದ್ದ ಶ್ರೀ ಅವಧೂತ ರಾಜಯೋಗಿ ಸಂತ ನಾಮದೇವಗೌಡ ಶರಣರು ಮಾತನಾಡಿ, ನಮ್ಮ ನುಡಿ, ಆಚಾರ ವಿಚಾರ ಶುದ್ಧವಾಗಿದ್ದರೆ ಅಂತಹವರಲ್ಲಿ ದೇವರು ನೆಲೆಸಿರುತ್ತಾನೆ. ಸರ್ವಧರ್ಮ ಸಮನ್ವಯ ಭಾವ ಎಲ್ಲರಲ್ಲೂ ಮೂಡಬೇಕು. ಚಿಕ್ಕ ವಯಸ್ಸಿನಲ್ಲೇ ಮಕ್ಕಳ ಮನಸ್ಸಿನಲ್ಲಿ ಸಮಭಾವ ಬೆಳೆಸುವ ಕೆಲಸ ಆಗಬೇಕು. ಬದುಕನ್ನು ಗೌರವದಿಂದ ಬಾಳಬೇಕು ಆ ಮೂಲಕ ಸಾಮಾಜಿಕ, ಆಧ್ಯಾತ್ಮಿಕ ಜೀವನದಲ್ಲಿ ಉನ್ನತಿ ಪಡೆದು, ಅನಂತ ಜೀವನಕ್ಕೆ ಬೇಕಾದ ಜ್ಞಾನವನ್ನು ಪಡೆದುಕೊಳ್ಳಬೇಕು. ಇದನ್ನು ತಿಳಿಸುವುದೇ ನಿಜವಾದ ಧರ್ಮ.ಇದರಲ್ಲಿ ಸಮಷ್ಟಿಯ ಹಿತ ಅಡಗಿದೆ' ಎಂದು ಅವರು ವಿವರಿಸಿದರು. ಗ್ರಾಮದ ಮುಖ್ಯ ದ್ವಾರದಿಂದ ಅನುಭವ ಮಂಟಪದ ತನಕ ಸಕಲ ವಾದ್ಯ ವೃಂದ ದಿಂದ ಅದ್ದೂರಿಯಾಗಿ ಮೆರವಣಿಗೆ ನಡೆಯಿತು.

ಈ ವೇಳೆ ಭೀಮಮ್ಮ ತಾಯಿ ಅಕ್ಕಲಕೋಟೆ ಶರಣರ ಮಠ ಗುಡದನಾಳ, ಮಹಾದೇವಪ್ಪ ಶರಣರು ಗೋರೆಬಾಳ, ಪದ್ಮಾವತಿ ಬಿ.ವಿ.ನಾಯಕ, ವಿ.ಎಂ.ಮೇಟಿ, ವೈ.ಎಂ ನವಲಗುಂದ ಆದಾಯ ಇಲಾಖೆ,

ಗ್ರಾಪಂ ಅಧ್ಯಕ್ಷ ಅಮರೇಶ ಪೋ.ಪಾ, ಶಿವಪ್ಪ ಪಕಲನಮರಡಿ, ಕರಿಯಪ್ಪ ಸೋಮರಡಿ, ಬಸವರಾಜ ರಾಮುಲು ಗಲಗ, ರಾಮಣ್ಣ ಸಿಂಧನೂರು, ಚನ್ನಬಸವ ಕಕ್ಕಲದೊಡ್ಡಿ,  ದೇವಣ್ಣ ನಾಯಕ ,ಮಾಲಿಗೌಡ,ದುರುಗಪ್ಪ. ಸೇರಿದಂತೆ ಮಠದ ಭಕ್ತಾದಿಗಳು ಹಾಗೂ ಸುತ್ತಲಿನ ಗ್ರಾಮಸ್ಥರು ಇದ್ದರು.

# ದಸರಾ ಹಬ್ಬದ ಅಂಗವಾಗಿ ಶ್ರೀ. ಭ್ರಮರಾಂಭದೇವಿ ಮಹಾರಥೋತ್ಸವ



**ಯುವ ಮಾರ್ಗ ಸುದ್ದಿ**

**ಮಾನ್ವಿ.ಅ.3–** ತಾಲೂಕಿನ ಬ್ಯಾಗವಾಟ ಗ್ರಾಮದ ಶ್ರೀಶೈಲ ಮಲ್ಲಿಕಾರ್ಜುನ ಹಾಗೂ ಶ್ರೀ. ಭ್ರಮರಾಂಭದೇವಿ ದೇವಸ್ಥಾನದ ಆವರಣದಲ್ಲಿ ದಸರಾ ಹಬ್ಬದ ಅಂಗವಾಗಿ ಶ್ರೀದೇವಿ ಪುರಾಣ ಮಹಾಮಂಗಲ ಅಂಗವಾಗಿ ಶ್ರೀ. ಶಾಂಭವಿ ದೇವಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ನಡೆಸಲಾಯಿತು. ಶಾಂಭವಿ ದೇವಿಯ ಮೂರ್ತಿಯನ್ನು ರಥದಲ್ಲಿ ಕೂಡಿಸಿ ಗ್ರಾಮದ ರಾಜಬೀದಿಯಲ್ಲಿ ಸುಮಂಗಲಿಯರಿಂದ ಮಹಾರಥೋತ್ಸವ ನಡೆಯಿತು.

ಕರೆಗುಡ್ಡ ಶ್ರೀ ಮಹಾಂತೇಶ್ವರ ಮಠದ ಶ್ರೀ ಮಹಾಂತಲಿಂಗ ಮಹಾಸ್ವಾಮಿಗಳು ರಥೋತ್ಸವಕ್ಕೆ ಚಾಲನೆ ನೀಡಿ ಆರ್ಶೀವಚನ ನೀಡಿದರು.

ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಟ್,ಸೇರಿದಂತೆ ಗ್ರಾಮದ ಸಾವಿರಾರು ಭಕ್ತರು ರಥೋತ್ಸವದಲ್ಲಿ ಭಾಗವಹಿಸಿದರು. ಹಾಗೂ ಪರಸ್ಪರ ಬನ್ನಿಯನ್ನು ವಿನಿಮಯ ಮಾಡಿಕೊಂಡು ಶುಭಕೋರಿದರು.

## ಕಾತರಕಿ ಗ್ರಾಮದಲ್ಲಿ ಅವಧೂತ ಅಯ್ಯಪ್ಪ ತಾತನವರ 11 ದಿನಗಳ ಪುರಾಣ ಪ್ರವಚನ ಕಾರ್ಯಕ್ರಮ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಅ,3–**ದಸರಾ ಹಬ್ಬವು ಸದಾ ಹಸಿರನ್ನು ಹೊದ್ದು ಕಣ್ಣಿಗೆ ತಂಪು ನೀಡುವ ಮೂಲಕ ಮನಸ್ಸನ್ನು ಮೃದುಗೊಳಿಸಿ ನೆಮ್ಮದಿಯಿಂದ ಜೀವನ ನಡೆಸಲು ಹಾಗೂ ಮಾನವೀಯತೆಯನ್ನು ಕಲಿಸಿಕೊಡುತ್ತದೆ. ಎಂದು ಶ್ರೀ ಅವಧೂತ ಅಯ್ಯಪ್ಪ ತಾತ ಕಾತರಿಕಿ ನುಡಿದರು.

ತಾಲೂಕಿನ ಕಾತರಕಿ ಗ್ರಾಮದ ಶ್ರೀ ಅವಧೂತ ಮೋನಪ್ಪಯ್ಯ ತಾತನವರ ಮಠದಲ್ಲಿ ನಡೆದ 13 ನೇ ವರ್ಷದ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮಾನವರಾದ ನಾವುಗಳು ನಮ್ಮ ಜೀವನವನ್ನು ಯಶಸ್ವಿಯಾಗಿ ನಡೆಸಬೇಕಾದರೆ


ಸರ್ವರನ್ನು ಸಮಾನವಾಗಿ ಕಾಣಬೇಕು.ನಮ್ಮಲ್ಲಿರುವ ದ್ವೇಷ, ಅಸೂಯೇ ಹಾಗೂ ಸ್ವಾರ್ಥವನ್ನು ಬಿಟ್ಟು. ಪ್ರೀತಿ, ವಿಶ್ವಾಸ, ಮಮತೆಯಿಂದ ಹಾಗೂ ಒಬ್ಬರನೊಬ್ಬರು ಕಾಳಜಿಗೆ ಮಾಡುತ್ತಾ ಜೀವನವನ್ನು ಸಾಗಿಸಬೇಕು ಎಂದರು.

ನಂತರ ನವರಾತ್ರಿ ಪ್ರಾರಂಭದ ದಿನದಿಂದ ಪ್ರತಿನಿತ್ಯ ದೇವಿಗೆ ವಿಜೃಂಭಣೆಯಿಂದ ಮಹಾಪೂಜೆ ಕುಂಕುಮಾರ್ಚನೆ ಹಾಗೂ 11 ದಿವಸದವರಿಗೆ ಸಾಯಂಕಾಲ ಸುಮಾರು 1001 ಜನರಿಗೆ ಪ್ರಸಾದ ವ್ಯವಸ್ಥೆ ಮಾಡಿ ಅತ್ಯಂತ ಯಶಸ್ವಿಯಾಗಿ ನೆರವೇರಿಸಿದರು.

ಗ್ರಾಮದಲ್ಲಿ ದಸರಾ ಹಬ್ಬದ ಪ್ರಯುಕ್ತ ಶ್ರೀ ಮಠದಲ್ಲಿ 13 ವರ್ಷದಿಂದ ನಡೆಸುವಂತಹ ಪುರಾಣ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿಸುವಲ್ಲಿ ಗ್ರಾಮದ ಹಿರಿಯರು ಹಾಗೂ ಯುವಕ ಮಂಡಳಿಯವರು ಮುಖ್ಯ ಪಾತ್ರ ವಹಿಸಿದ್ದರು.

ಪ್ರತಿದಿನ ಪ್ರವಚನವನ್ನು ಸಂಗಾಪುರದ ಶ್ರೀ ಮೌನಯ್ಯ ತಾತನವರು ನೇರವೇರಿಸಿ ಕೊಟ್ಟರು.

ನಂತರ ಪ್ರಸಾದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ 11 ದಿಸದವರೆಗೆ ಮಾಡಿರುವಂತಹ ಗೋಪಾಲ್, ಅಂಬಣ್ಣ, ಸುರೇಶ್, ರಮೇಶ್ ಕೊಡಗರ್, ಹಾಗೂ ಗ್ರಾಮದ ಪ್ರತಿಯೊಂದು ಕೆಲಸಕ್ಕೂ ಮುಂದೆ



ನಿಲ್ಲುವ ವ್ಯಕ್ತಿ ನರಸಿಂಹ ಕೆ.ಇ.ಬಿ ಅವರಿಗೆ ಊರಿನ ಯುವಕರ ಮಂಡಳಿಯವರು ಹಾಗೂ ಊರಿನ ಹಿರಿಯರು ಸೇರಿ  ಸನ್ಮಾನಿಸಿ ಗೌರವಿಸಿದರು.

ಕೊನೆಗೆ ಸಂಜೆ 6 ಗಂಟೆಗೆ ಶ್ರೀ ಮೋನೆಯ್ಯ ತಾತವರ ಮಠದಿಂದ ಪಲ್ಲಕ್ಕಿ ಸೇವೆ ಮಹಾಕಾಳಿ ಕಟ್ಟೆಯವರೆಗೆ ಅದ್ದೂರಿಯಾಗಿ ನೆರವೇರಿತು.

ಈ ಸಂದರ್ಭದಲ್ಲಿ ಮಂಜುನಾಥ್ ಅಂಬಿಗೇರ, ರಾಮಲಿಂಗ ಬಂಗೇರ್, ವೆಂಕಟೇಶ್ ಅಂಗಡಿ,ಕಾಶಿನಾಥ್ ಹೊಸಮನಿ,ಗುರು ಅಗಸರು,ರಮೇಶ ಅಂಬಿಗೇರ್, ರವಿ,ಚಂದ್ರು,ತಿಪ್ಪಣ್ಣ,ದೇವರಾಜ್ ನಾಯಕ್, ಮೌನೇಶ್ ನಾಯಕ್ ಸೇರಿದಂತೆ ಯುವಕರು ನೂರಾರು ಭಕ್ತರು ಉಪಸ್ಥಿತರಿದ್ದರು.

## ಪುರಾಣ ಪ್ರವಚನ ,ಸತ್ಸಂಗ ಕಾರ್ಯಕ್ರಮದಿಂದ ಮನಸ್ಸಿಗೆ ಶಾಂತಿ,ನೆಮ್ಮದಿ ದೊರೆಯುತ್ತಿದೆ: ರಾಜಶೇಖರನಾಯಕ ಅಭಿಪ್ರಾಯ



**ಯುವ ಮಾರ್ಗ ಸುದ್ದಿ**

**ಅರಕೇರಾ,ಅ.3–** ಗ್ರಾಮಗಳಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಿಂದ ಸಮಾಜದಲ್ಲಿ ಸಮನ್ವಯ ಮತ್ತು ಮನಸ್ಸಿಗೆ ಶಾಂತಿ ನೆಮ್ಮದಿ ಸಿಗುತ್ತದೆ. ದಾರ್ಮಿಕ ಕಾರ್ಯಕ್ರಮಗಳು ಸಂಸ್ಕೃ ತಿಯ ಪ್ರತೀಕವಾಗಿವೆ.ಪುರಾಣ ಪ್ರವಚನಗಳ ನಡೆಯುತ್ತಿರು ವದರಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೇಳುವದರಿಂದ ಮನುಷ್ಯನಿಗೆ ಶಾಂತಿ ನೆಮ್ಮದಿದೊರೆಯುತ್ತಿದೆ ಸಿದ್ದಾರೂಢ ಮಠವು ಈ ಭಾಗದ ಧಾರ್ಮಿಕ ಜಾಗೃತಿ ತಾಣವಾಗಿದೆ ಭಕ್ತರ ಸಹಕಾರದಿಂದ ಇಲ್ಲಿನ 'ಮಠವು ಉತ್ತಮ ಕಾರ್ಯ ಮಾಡಲು ಸಾಧ್ಯವಾಗಿದೆಂದು ಆರ್. ಡಿ.ಸಿ.ಸಿ ಬ್ಯಾಂಕ್ ಮಾಜಿ ಅಧ್ಯಕ್ಷರು ಹಾಲಿ ನಿರ್ದೇಶಕರಾದ ರಾಜಶೇಖರನಾಯಕ ಹೇಳಿದರು.

ಅವರು ಅರಕೇರಾ ತಾಲ್ಲೂಕಿನ ಬಿ.ಗಣೇಕಲ್ ಗ್ರಾಮದಲ್ಲಿ ಶ್ರೀಶಿವ ಸಿದ್ದಾಶ್ರಮ ಶ್ರೀಸಿದ್ದಾರೂಢ ಮಠದಲ್ಲಿ ಪ್ರತಿವರ್ಷದಂತೆ ಈವರ್ಷಕೂಡಾ ನವರಾತ್ರಿ ಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಶ್ರೀದೇವಿ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಂದರ್ಭದಲ್ಲಿ ಚನ್ನವೀರಯ್ಯಸ್ವಾಮಿ ಹಿರೇಮಠ ಟಿ ಎ ಪಿ ಎಂ ಸಿ ನಿರ್ದೇಶಕರು ಯುವ ಮೋರ್ಚಾ ಅಧ್ಯಕ್ಷ ಕೆ.ಭಗವಂತ್ರಾಯ ನಾಯಕ, ಅರಕೇರಾ ಬಿಜೆಪಿ ಮಂಡಲ ಅಧ್ಯಕ್ಷ ಲಕ್ಷ್ಮಣ ರಾಠೋಡ್ ಪ್ರಧಾನ ಕಾರ್ಯದರ್ಶಿ ನಾಗರಾಜ ಅಬಕಾರಿ, ತಾಲ್ಲೂಕು ವಕ್ತಾರ ಜಿ.ಹನ್ಮಂತ್ರಾಯ ನಾಯಕ ಕೊತ್ತದೊಡ್ಡಿ, ಕಾರ್ಯದರ್ಶಿ ಮಲ್ಲಯ್ಯ ಪೂಜಾರಿ, ಕೆಂಚಣ್ಣಪೂಜಾರಿ,ಹಂಪಯ್ಯನಾಯಕ,ಕಲ್ಲಪ್ಪದೇಸಾಯಿ, ಗ್ರಾಮದ ಹಿರಿಯ ಮುಖಂಡರುಗಳಾದ ಮುದಕಣ್ಣಪೂಜಾರಿ ಶರಣಗೌಡಮಾಲಿಪಾಟೀಲ್  ರಾಚಣ್ಣ ಅಬಕಾರಿ,ಶಾಂತಪ್ಪ ಸಾಹುಕಾರ ಅಂಗಡಿ, ವಿರೇಶಗೌಡ, ಮಹೇಶಗೌಡ ,ಶಿವಣ್ಣದೊರೆಕ್ವಾಟೆ, ಟಿ,ಶಿವಣ್ಣ,ಸಿದ್ದಪ್ಪದೊರೆ,ಬಸವರಾಜ ಪಲ್ಲೇದ್ ಸೂಗೂರೇಶ್ವರಪ್ಪ ಬಳೆ,ಶಿವಪ್ಪ ಕಂಬಾರ, ಹಾಗೂ ಬಿ.ಗಣೆಕಲ್ ಗ್ರಾಮಸ್ಥರು ಸುತ್ತಮುತ್ತಲ್ಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರನ್ನು ಶ್ರೀಮಠದವತಿಯಿಂದ ಶ್ರೀಸೋಮೇಶ್ವರಾನಂದ ಸ್ವಾಮಿಗಳು ಸನ್ಮಾನಿಸಿ ಆಶೀರ್ವಾದಿಸಿದರು.

# ಬದುಕಿಗೆ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮ ಮಾರ್ಗದರ್ಶನ: ಶ್ರೀ ಅಭಿನವ ರಾಚೋಟಿವೀರ ಶಿವಾಚಾರ್ಯ ಸ್ವಾಮೀಜಿ ಸೋಮವಾರ ಪೇಟೆ ಹಿರೇಮಠ



ಯುವ ಮಾರ್ಗ ಸುದ್ದಿ

**ಅರಕೇರಾ,ಅ.3**–ಇಂತಹ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾದರೆ ಎಷ್ಟೋ ಜನ್ಮದ ಪುಣ್ಯ ಇದ್ದಾಗ ಮಾತ್ರ ಸಾಧ್ಯ ದೇವಿ ಭಾಗವರ ಹೇಳುತ್ತದೆ 14 ಜನ್ಮದ ಪುಣ್ಯ ಇದ್ದಾಗ ಮಾತ್ರ ಇಂತಹ ಕಾರ್ಯಕ್ರಮದಲ್ಲಿ ಭಾಗವವಹಿಸುತ್ತಾರೆ ಅದನ್ನು ಇನ್ನೂಬ್ಬರಿಗೂ ಹೇಳುತ್ತಾರೆ 28 ಜನಮದ ಪುಣ್ಯ ಇದ್ದಾಗ ಮತ್ರ ಇಂತಹ ಕಾರ್ಯಕ್ರಮದ ಭಾಗವಹಿಸಿ ತಮ್ಮ ಅಳಿವು ಸೇವೆಯನ್ನು ಸಲ್ಲಿಸುತ್ತಾರೆ ಅಂತಹ 28 ಜನ್ಮದ ಪುಣ್ಯಗಳನ್ನು ಮಾಡಿರುವವರು ಯಾರಾದರೂ ಇದ್ದಾರೆ ನಾಗೋಲಿ ಗ್ರಾಮಸ್ಥರು ಸದ್ಭಕ್ತಾದಿಗಳು ಎಂದು ಹೇಳಿದರೆ ತಪ್ಪಾಗಲಾರದಂದು ಶ್ರೀ ಅಭಿನವ ರಾಚೋಟಿವೀರ ಶಿವಾಚಾರ್ಯ ಸ್ವಾಮೀಜಿ ಸೋಮವಾರ ಪೇಟೆ ಹಿರೇಮಠರಾಯಚೂರು ಮತ್ತು ಅತ್ತನೂರು ಹೇಳಿದರು.

ಅರಕೇರಾ ತಾಲೂಕಿನ ನಾಗೋಲಿ ಗ್ರಾಮದಲ್ಲಿ ದಸರಾ ಹಬ್ಬದ ನಿಮಿತ್ತವಾಗಿ, ಶ್ರೀ ದೇವಿ ಪುರಾಣ ಪ್ರವಚನ ಮಂಗಳ ಕಾರ್ಯಕ್ರಮ ಅಶೀರ್ವಚನ ನೀಡಿದರು.ಮತ್ತು ಮುತ್ತೈದ ಮಹಿಳಯರಿಗೆ ಉಡಿತುಂಬವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಪುರಾಣಿಕರು ಹೇಳಿ ಹಾಗೆ ನಾಗೋಲಿ ಗ್ರಾಮದಲ್ಲಿ ಯಾವುದೇ ಜಾತಿ ಮತ ಪಂಥವನ್ನು ಬಿಟ್ಟು ಎಲ್ಲರೂ ಕೂಡಾ ದೇವಿ ಪುರಾಣ ದ್ಯಾವಮ್ಮನ ಸೇವೆ ನಾವು ಮಾಡಬೇಕು ಅಂತ ಹೇಳಿ ಎಲ್ಲರೂ ಕಂಕಣ ಬದ್ದರಾಗಿ ಎಲ್ಲರೂ ಮಾಡ್ತಾ ಇದ್ದೀರಿ ಅಂತ ಹೇಳಿ ಮೂರನೇ ವರ್ಷದ ಪುರಣ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿರ್ತಕ್ಕಂತ ಕಾರ್ಯಕ್ರಮ ದೇವಿ ಪುರಾಣ ಆಗಿದೆ ಅಂದರೆ ತಪ್ಪಾಗಲಿಕ್ಕಿಲ್ಲ.

ದೇವಿ ಅಂದರೆನೇ ಶಕ್ತಿ ಬಹಳ ದೊಡ್ಡ ಶಕ್ತಿ ಶಕ್ತಿ ಇರದ ಶಿವ ಶೌರ್ಯ ಇರುವುದಿಲ್ಲ ಶಕ್ತಿ ಇರದೇ ಏನನ್ನು ಮಾಡಲು ಸಾಧ್ಯವಿಲ್ಲ ಶಕ್ತಿ ಇದ್ದರೆ ಮಾತ್ರ ಎಲ್ಲವನ್ನು ಸಾಧಿಸಲು ಸಾಧ್ಯ ಶಕ್ತಿ ಬೇಕು ಅಂತ ನಾವು ನಿವೇಲ್ಲರೂ ದೇವಿಯ ಆರಾಧನೆ ಮಾಡಬೇಕು. ದೇವಿಯ ಶಕ್ತಿಯ ಬಗ್ಗೆ ಗೋತ್ತಾಗುತ್ತದೆ ಅದ್ಭುತವಾದ ಶಕ್ತಿ ದೇವಿಯಲ್ಲಿ ಇದೇ ಎಂದು ಇದು ದೇವಿ ಪುರಾಣ ಅಲ್ಲ ದೇಹದ ಪುರಾಣನು ಸಹ ಇದೆ. ದೇವಿಯನ್ನು ಯಾರೇ ಅಲ್ಲಗಳಿದ್ದರೂ ಸಹ ಅವರನ್ನು ಸುಮ್ಮನೆ ಬೀಡುವುದಿಲ್ಲ ಶುಭ ನಿಶುಂಭ ಮಹಿಷಾಸುರ, ರಕ್ತಬೀಜಾಸುರ ಎಲ್ಲರೂ ಸಹ ಅಳಿದು ಹೋದರು ನಿಮ್ಮಲ್ಲಿಗೂ ಸಹ ನಾನು ಎನ್ನತಕ್ಕಂಥದ್ದು ಬರಬಾರದು.

ಅರ್ದ ರಾತ್ರಿಯಲ್ಲಿ ಎದ್ದು ಹೋದವರೆಲ್ಲ ಗೌತಮ ಬುದ್ದರಾಗುವುದಿಲ್ಲಯ್ಯ ಸನ್ಯಾಸವ ಸ್ವೀಕರಿದವರೆಲ್ಲರೂ ಶಂಕರಾಚಾರ್ಯರಾಗುವುದಿಲ್ಲಯ್ಯ ಉಪನಯನ ನಿರಾಕರಿಸಿದವರೆಲ್ಲರೂ ಬಸವಣ್ಣನಾಗುವುದಿಲ್ಲಯ್ಯ ಶಾಸನಗಳೆಲ್ಲ ಉಲ್ಲಂಘಿಸಿದವರು ಗಾಂಧೀಜಿಯಾಗುವರೇನಯ್ಯ ಮಠಾಧೀಪತಿ ಎಲ್ಲರೂ ಲಿಂಗೈಕರಾಗದೇ ಶಿವಾಚಾರ್ಯರಾಗುವರೆನಯ್ಯ ಸ್ವತಂತ್ರಧೀರ ಸಿದ್ದೇಶ್ವರ ನಿನ್ನ ಹೆಸರು ಬಳಸಿದವರೆಲ್ಲ ನೀನಾಗುವರೆನಯ್ಯ ಒಬ್ಬರಂತೆ ಇನ್ನೂಬ್ಬರು ಆಗಲು ಬರುವುದಿಲ್ಲ ಆದೇವಿಯನ್ನು ಅಲ್ಲ ಬೆಳೆದವರೆಲ್ಲ ಕೂಡ ಹಳೆದು ಹೋದರು ಎಂದು ಹೇಳಿದರು.

ನಾಗೋಲಿ ಯುವಕರು ಹಿರಿಯರೆಲ್ಲರನ್ನು ಸೇರಿಸಿಕೊಂಡು ದೇವಿ ಪುರಾಣವನ್ನು ನಾಗೋಲಿ ಎಲ್ಲರೂ ಸೃಇಕೊಂಡು ಮಾಡುವುದನ್ನು ನೋಡಿ ನಮಗಂತೂ ಬಹಳಷ್ಟು ಸಂತೋಷವಾಗಿದೆ ಊರು ಸಣ್ಣದಿದ್ದರೂ ಸಹ ನಾಗೋಲಿಯ ಜನರ ಮನಸ್ಸು ಮಾತ್ರ ಬಹಳ ದೊಡ್ಡದಿದೆ ದೊಡ್ಡ ದೊಡ್ಡ ಊರುಗಳಿದ್ದರು ಸಹ ಸ್ರಾವಣ ಮಾಸದಲ್ಲಿ ದೇವಿ ಪುರಾಣ ನಡೆಯುವುದಿಲ್ಲ ಆದರೆ ನಾಗೋಲಿ ಊರು ಸಣ್ಣದಿದ್ದರೂ ಸಹ ಲಕ್ಷ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ದೇವಿ ಪುರಾವನ್ನು ಮಾಡುತ್ತಿದ್ದಾರೆ. ಸೋಮವಾರಪೇಟೆ ಹಿರೇಮಠಕ್ಕೆ ನಾಗೋಲಿಯ ಭಕ್ತರು ಬಲಗೈ ಇದ್ದಂದತೆ ಎಂದು ಶ್ರೀಗಳು ಹೇಳಿದರು.

ಶ್ರೀ ಅಭಿನವ ರಾಚೋಟಿವೀರ ಶಿವಾಚಾರ್ಯ ಸ್ವಾಮೀಜಿ ಸೋಮವಾರ ಪೇಟೆ ಹಿರೇಮಠರಾಯಚೂರು ಮತ್ತು ಅತ್ತನೂರು ಇವರಿಗೆ ಗ್ರಾಮದಪರವಾಗಿ ಮಲ್ಲನಗೌಡ ಮಾಲಿಪಾಟೀಲ್ ,ಸಿದ್ದನಗೌಡಪೋಲಿಸ್ ಪಾಟೀಲ್ ಸನ್ಮಾನಿಸಿಗೌರವಿಸಿದರು.

ಪ್ರವಚನಕಾರರು– ಪೂಜ್ಯ ಶ್ರೀ ಲಿಂ. ಪಂಡಿತ್ ಪುಟ್ಟರಾಜ ಗವಾಯಿಗಳ ಶಿಷ್ಯರಾದ, ಶ್ರೀ ವೇ.ಮೂ.ಜಗದೀಶ್ವರ ಶಾಸ್ತ್ರಿಗಳು ಹಿರೇಮಠ ಸಾ.ಮದ್ಲಾಪೂರು, ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ. ಗವಾಯಿಗಳು, ಶ್ರೀ ಜಕ್ಕಣ ಬೆಳಗಾವ್ ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ. ತಬಲವಾದಕರು– ಬಸವರಾಜ ಎಸ್.ಅಂಗಡಿ ಸಾ. ಬಿಲಿಳ್ಳಿ, ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ. ಶ್ರೀ ದೇವಿ ಪುರಾಣ ಕಾರ್ಯಕ್ರಮ 11 ದಿನಗಳ ಕಾಲ ನಡೆಸಿಕೊಟ್ಟರು. ಸಂದರ್ಭದಲ್ಲಿ ಅಯ್ಯಪ್ಪಸ್ವಾಮಿ,ರಾಚೋಟಿಸ್ವಾಮಿ ನಂದಿಮಠ, ಚನ್ನಬಸವನಾಯಕ, ಮೌನೇಶ್ವರ ಅರ್ಚಕರು, ಮಲ್ಲನಗೌಡ ಮಾಲಿಪಾಟೀಲ್ ,ಸಿದ್ದನಗೌಡಪೋಲಿಸ್ ಪಾಟೀಲ್, ಶಿವರಾಜಪ್ಪಗೌಡ ಮಾಲಿಪಾಟೀಲ್ ಬೂದೆಪ್ಪದೊರೆ, ಚನ್ನಪ್ಪ ಗದ್ವಾಲ, ಸಾಭಯ್ಯಮಸ್ಕಿ, ಮುದಕಪ್ಪಬಾಗ್ಲಿ, ಮಾರ್ತಂಡಪ್ಪಬುದ್ದಿನ್ನಿ, ನಾಗೋಲಿ ಗ್ರಾಮದ ಸಮಸ್ತನಾಗರಕರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಬಾಲಕನ್ಯೆಯರಿಗೆ, ಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮ ನಡೆಯಿತು.

# ಗಾಂಧೀಜಿಯವರ ತತ್ವ–ಸಿದ್ಧಾಂತಗಳು ಸರ್ವಕಾಲಕ್ಕೂ ಶ್ರೇಷ್ಠ : ವಿರೇಶ ಆದೋನಿ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಅ.3**–ದೇಶಕ್ಕೆ ಅಹಿಂಸಾ ಮಾರ್ಗದ ಮೂಲಕ ಸ್ವಾತಂತ್ರ್ಯತಂದು ಕೊಟ್ಟ ಮಹಾನ್ ಚೇತನ ಮಹಾತ್ಮ ಗಾಂಧೀಜಿ.ಇವರು ಜನತೆಗೆ ಮಾನವೀಯ ಮೌಲ್ಯಗಳನ್ನು ಬೋಧಿಸಿದರು.ಇವರ ತತ್ವ– ಸಿದ್ಧಾಂತಗಳು.ಸರ್ವಕಾಲಕ್ಕೂ ಶ್ರೇಷ್ಠತೆ ಪಡೆದುಕೊಂಡಿವೆ ಎಂದು ಶ್ರೀ ಉಮಾಮಹೇಶ್ವರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ವಿರೇಶ ಆದೋನಿ ಹೇಳಿದರು.ಪಟ್ಟಣದ ಶ್ರೀ ಉಮಾ ಮಹೇಶ್ವರಿ ಪದವಿ ಪೂರ್ವ ಕಾಲೇಜಿನಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.ಗಾಂಧೀಜಿ ನಮಗೆ ಸ್ವಾತಂತ್ರ್ಯವನ್ನು ತಂದುಕೊಟ್ಟಿದ್ದಾರೆ.ಅವರ ಬಗೆಗೆ ಎಷ್ಟು ಬಣ್ಣಿಸಿದರು ಸಾಲದು. ಅವರ ನಡೆ–ನುಡಿ, ತತ್ವ–ಆದರ್ಶಗಳನ್ನು ಪಾಲಿಸುವುದರ ಜೊತೆಗೆ ಮುಂದಿನ ಪೀಳಿಗೆಗೆ ತಿಳಿಸುವಂತಹ ಕೆಲಸವನ್ನು ಮಾಡಬೇಕು ಎಂದರು.ದೇಶ ಕಂಡಂತಹ ಅಪ್ರತಿಮ ನಾಯಕ ಲಾಲ್ ಬಹದ್ದೂರ್ ಶಾಸ್ತ್ರೀಜೀ ಸರಳ ಸಜ್ಜನಿಕೆ ಹಾಗೂ ಭ್ರಷ್ಟಚಾರ ಮುಕ್ತ ಆಡಳಿತವನ್ನು ನೀಡಿದವರು.ತಾವು ಪ್ರಧಾನ ಮಂತ್ರಿಯಾದ ಕಡಿಮೆ ಅವಧಿಯಲ್ಲೇ ಅತ್ಯಂತ ಪ್ರಾಮಾಣಿಕವಾದ ಆಡಳಿತವನ್ನು ನೀಡಿ ಜೈ ಜವಾನ್ ಜೈ ಕಿಸಾನ್ ಸಂದೇಶದ ಮೂಲಕ, ರೈತರ ಸಬಲೀಕರಣ, ಮಹಿಳಾ ಸಬಲೀಕರಣ ಗೊಳಿಸಿದ ಕೀರ್ತಿ ಶಾಸ್ತ್ರೀಜಿಯವರಿಗೆ ಸಲ್ಲುತ್ತದೆ ಎಂದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ಜಿ ಮಂಜುನಾಥ್, ಮಸ್ತಾನ್ ಸಾಬ್, ಯಮನೂರಪ್ಪ, ಚನ್ನಬಸವಸ್ವಾಮಿ, ರವಿಕುಮಾರ, ಗಂಗಾಧರ, ಉಪನ್ಯಾಸಕಿಯರಾದ ಸ್ವರ್ಣಲತಾ, ನಿರ್ಮಲಾ, ಶಾಂತಲಾ, ಸಲ್ಮಾ, ಸಾನಿಯಾ, ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ದೇವರನಿಂಬರಗಿ ಗ್ರಾಮದಲ್ಲಿ ಅಪ್ರಾಪ್ತ ಬಾಲಕನ ಅಪಹರಣಕ್ಕೆ ವಿಫಲ ಯತ್ನ: ಆರೋಪಿ ಸೆರೆ



**ವಿಜಯಪುರ, ಅ. 3–** ಸೆಪ್ಟೆಂಬರ್ 3ರಂದು ಹಂತಕರ ಗುಂಡಿಗೆ ಬಲಿಯಾಗಿದ್ದ ದೇವರನಿಂಬರಗಿ ಗ್ರಾಮದ ಭೀಮನಗೌಡ ಬಿರಾದಾರ ಎಂಬುವರ ಅಪ್ರಾಪ್ತ ಪುತ್ರನ ಅಪಹರಣಕ್ಕೆ ಗುರುವಾರ ಸಂಜೆ ದೇವರನಿಂಬರಗಿ ಭೀಮನಗೌಡ ಬಿರಾದಾರ ತೋಟದ ನಿವಾಸದ ಬಳಿ ವಿಫಲ ಯತ್ನ ನಡೆದಿದ್ದು, ಈ ಬಗ್ಗೆ ಗ್ರಾಮಸ್ಥರಲ್ಲಿ ಮತ್ತೆ ಆತಂಕ ಮೂಡಿದೆ.

ಕಳೆದ ಸಪ್ಟೆಂಬರ್ 3 ರಂದು ದೇವರನಿಂಬರಗಿ ಗ್ರಾಮದಲ್ಲಿ ಭೀಮನಗೌಡ ಬಿರಾದಾರ ಹತ್ಯೆಗೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ನಾಲ್ವರು ಪ್ರಮುಖ ಆರೋಪಿಗಳನ್ನು ಬಂಧಿಸಿದ್ದಾರೆ. ಆದಾಗ್ಯೂ ಗುರುವಾರ ಸಂಜೆ ಭೀಮನಗೌಡ ಅವರ ಅಪ್ರಾಪ್ತ ಪುತ್ರನ ಅಪಹರಣ ಮಾಡುವ ವಿಫಲ ಯತ್ನ ನಡೆದಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ದೇವರನಿಂಬರಗಿ ಗ್ರಾಮದ ಹೊರ ಭಾಗದ ತೋಟದಲ್ಲಿರುವ ಭೀಮನಗೌಡ ನಿವಾಸಕ್ಕೆ ಅದೇ ಗ್ರಾಮದ ಸುನೀಲ ಎಂಬಾತ ತೆರಳಿ ಬನ್ನಿ ವಿನಿಮಯ ನೆಪದಲ್ಲಿ ಅಪ್ರಾಪ್ತ ಬಾಲಕನ ಅಪಹರಣ ಮಾಡುವ ಯತ್ನ ನಡೆಸಿದ್ದು, "ನಿನ್ನ ಅಪ್ಪನನ್ನು ನಾವೇ ಮರ್ಡರ್ ಮಾಡಿದ್ದೇವೆ. ನಿನ್ನನ್ನೂ ಮರ್ಡರ್ ಮಾಡುತ್ತೇವೆ" ಎಂದು ಅಪ್ರಾಪ್ತ ಬಾಲಕನನ್ನು ಹೆದರಿಸಿ ಅಪಹರಣ ಮಾಡಲು ಸುನೀಲ ಯತ್ನಿಸಿದ್ದಾನೆ.

ಆಗ ಅಲ್ಲೇ ಇದ್ದ ಭೀಮನಗೌಡ ಬಿರಾದಾರ ಕುಟುಂಬದವರು ಗಮನಿಸಿ ಮಗುವನ್ನು ಸುನೀಲ್ ನಿಂದ ರಕ್ಷಿಸಿದ್ದಾರೆ. ಘಟನೆ ಬಳಿಕ ಅಲ್ಲಿಂದ ಸುನೀಲ ಪರಾರಿಯಾಗಿದ್ದಾನೆ.

ಈ ಘಟನೆ ಖಂಡಿಸಿ ಚಡಚಣ ಕ್ರಾಸ್ ಬಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಿ, ರಸ್ತೆ ಮೇಲೆ ಟೈರ್ ಇಟ್ಟು ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭೀಮನಗೌಡ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಆರೋಪಿ ಸುನೀಲ್ ನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಚಡಚಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

# ಇಂದಿನ ಯುವ ಜನಾಂಗ ಗಾಂಧಿ ಅಹಿಂಸಾ ತತ್ವದಿಂದ ವಿಮುಖ: ಕುಲಪತಿ ಪ್ರೊ. ಕೋರಿಶೆಟ್ಟಿ



**ವಿಜಯಪುರ,ಅ.3–** ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಪ್ರತಿಪಾದಿಸಿದ ಅಹಿಂಸಾ ತತ್ವದಿಂದ ಇಂದಿನ ಯುವಜನಾಂಗ ವಿಮುಖವಾಗುತ್ತಿರುವುದು ವಿಷಾದನೀಯ ಸಂಗತಿ ಎಂದು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಹೇಳಿದರು.

ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಎನ್.ಎಸ್. ಎಸ್ ಕೋಶ ಹಾಗೂ ಗಾಂಧಿ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಹಾತ್ಮಾ ಗಾಂಧಿಜಿ ಹಾಗೂ ಲಾಲ್ ಬಹಾದ್ದೂರ ಶಾಸ್ತ್ರಿಯವರ ಜನ್ಮದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಗ್ರಾಮೀಣ ಅಭಿವೃದ್ಧಿಗೆ ಅಡಿಪಾಯ ಹಾಕಿದ ಗಾಂಧೀಜಿ ಅವರು ಆ ಮೂಲಕ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ರೂಪಿಸಿದರು. ಇವತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮಗಳ ಅಭಿವೃದ್ಧಿಗೆ ಗಾಂಧೀಜಿ ಅವರು ಹಾಕಿಕೊಟ್ಟ ಗ್ರಾಮ ಸ್ವರಾಜ್ಯ ಕಲ್ಪನೆಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುತ್ತಿವೆ ಎಂದು ಹೇಳಿದರು.

ಅದೇ ರೀತಿಯಾಗಿ ಲಾಲ್ ಬಹಾದ್ದೂರ ಶಾಸ್ತ್ರೀಜಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಒಬ್ಬ ಧೀಮಂತ ವ್ಯಕ್ತಿ. ಅವರು ತಮ್ಮ ಬಾಲ್ಯದಲ್ಲಿ ಅನೇಕ ಕಷ್ಟಗಳು ಇದ್ದರೂ ಶಿಕ್ಷಣ ಪಡೆದುಕೊಂಡು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದವರು. ದೇಶ ಕಂಡ ಅಪ್ರತಿಮ ಆಡಳಿತಗಾರ ಎಂದು ಬಣ್ಣಿಸಿದರು.

ಹಿರಿಯ ಪ್ರಾಧ್ಯಾಪಕ ಪ್ರೊ.ಪಿ.ಜಿ.ತಡಸದ, ಅವರು ಮಾತನಾಡಿ, ಗಾಂಧೀಜಿ ಮತ್ತು ಲಾಲ್ ಬಹಾದ್ದೂರ್‌ಶಾಸ್ತ್ರಿ ಅವರ ಜೀವನ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿದ್ದು ಅವುಗಳ ಪಾಲನೆ ನಮ್ಮೆಲ್ಲರ ಕರ್ತವ್ಯವಾಗಬೇಕು ಎಂದರು.

ಮಹಾತ್ಮಾಗಾಂಧೀಜಿ ಜನ್ಮದಿನಾಚರಣೆ ಸಮಿತಿ ಅಧ್ಯಕ್ಷ ಪ್ರೊ.ಮಹೇಶ ಚಿಂತಾಮಣಿ ಅವರು, ಗಾಂಧಿಜಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀಮಂತ ವ್ಯಕ್ತಿ. ಸ್ವಾತಂತ್ರ್ಯ ದೊರಕಿಸಿ ಕೊಡುವಲ್ಲಿ ಅವರು ಮುಂಚೂಣಿಯಲ್ಲಿದ್ದರು. ಲಕ್ಷಾಂತರ ಜನ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳಿಂದ ನಮಗೆ ದೊರೆತಿರುವ ಸ್ವಾತಂತ್ರ್ಯವನ್ನು ನಾವೆಲ್ಲಾ ಕಾಪಾಡಿಕೊಂಡು ಹೋಗಬೇಕಿದೆ ಎಂದರು.

ಸಿಂಧನೂರು ಸ್ನಾತಕೋತ್ತರ ಕೇಂದ್ರದ ವಿಶೇಷಾಧಿಕಾರಿ ಪ್ರೊ.ಪಿ.ಕಣ್ಣನ್, ಮಾತನಾಡಿ, ದೇಶದ ಸಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿವರು ಪಾತ್ರ ಎಷ್ಟು ಮುಖ್ಯವೆಂದು ಹೇಳಿದರು.

ಗಾಂಧೀಜಿಯವರು ದಕ್ಷಿಣ ಆಫ್ರಿಕಾಕ್ಕೆ ಹೋದಾಗ ಅವರಿಗೆ ಆದಂತಹ ಕರಿಯರು ಬಿಳಿಯರು ಭೇದ ತಾರತಮ್ಯದ ಕಹಿ ಅನುಭವಗಳು ಅವರಿಗೆ ಸತ್ಯ ಮತ್ತು ಅಹಿಂಸೆ ಬಗ್ಗೆ ಪಾಠಗಳನ್ನು ಕಲಿಸಿಕೊಟ್ಟವು. ಆದ್ದರಿಂದಲೆ ಅವರಿಗೆ ಭಾರತ ದೇಶದಲ್ಲಿ ಆಳುತಿದ್ದ ಬ್ರಿಟಿಷರ ವಿರುದ್ದ ಹೋರಾಡುವ ಕಿಚ್ಚು ಹೊತ್ತಿಕೊಂಡಿತು ಎಂದು ವಿವರಿಸಿದರು.

ಕುಲಸಚಿವ (ಮೌಲ್ಯಮಾಪನ) ಪ್ರೊ. ಬಸವರಾಜ ಲಕ್ಕಣ್ಣವರ, ಪ್ರಾಧ್ಯಾಪಕರಾದ ಪ್ರೊ. ಓಂಕಾರ ಕಾಕಡೆ, ಪ್ರೊ.ಡಿ.ಎಮ್.ಮದರಿ, ಪ್ರೊ.ಜ್ಯೋತಿ ಉಪಾಧ್ಯಾಯ, ಪ್ರೊ.ಹಣಮಂತಯ್ಯ ಪೂಜಾರಿ, ಪ್ರೊ.ರಾಜಕುಮಾರ ಮಾಲಿಪಾಟೀಲ್, ಡಾ.ಸಂಜೀವ ಗಿರಿ, ಡಾ. ಕಲಾವತಿ ಎಚ್. ಕಾಂಬಳೆ, ಡಾ.ಜಾಯ್ ಹೊಸಕೇರಿ ಡಾ.ಪ್ರಕಾಶ ಸಣ್ಣಕ್ಕನವರ, ಹಾಗೂ ಅತಿಥಿ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಗಾಂಧಿ ಅಧ್ಯಯನ ಕೇಂದ್ರದ ಸಂಯೋಜಕ ಡಾ.ಅಮರನಾಥ ಪ್ರಜಾಪತಿ ಸ್ವಾಗತಿಸಿ, ವಂದಿಸಿದರು.

# ದೈವಿ ಗುಣಗಳನ್ನು ಬಲಗೊಳಿಸುವುದೇ ವಿಜಯ ದಶಮಿಯ ಗುರಿ:ರಂಭಾಪುರಿ ಜಗದ್ಗುರುಗಳು

**ಬಸವಕಲ್ಯಾಣ–ಅ.3**–ಮನುಷ್ಯನಲ್ಲಿರುವ ಅಸುರಿ ಗುಣಗಳು ನಾಶವಾಗಿ ದೈವೀ ಗುಣಗಳನ್ನು ಬಲಗೊಳಿಸುವುದೇ ದಸರಾ ಹಬ್ಬದ ಮೂಲ ಗುರಿಯಾಗಿದೆಯೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ವಿಜಯ ದಶಮಿಯ ಅಂಗವಾಗಿ ಶಮಿ ಸೀಮೊಲ್ಲಂಘನ ನೆರವೇರಿಸಿ ಮಾನದ ಧರ್ಮ ವೇದಿಕೆಯಲ್ಲಿ ಶಾಂತಿ ಸಂದೇಶ ನೀಡುತ್ತಿದ್ದರು.

ಜೀವನದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಮುಖ್ಯ. ಮೌಲ್ಯಾಧಾರಿತ ಬದುಕಿಗೆ ಬೆಲೆಯಿದೆ. ಆತ್ಮ ವಿಶ್ವಾಸ ನಿಶ್ಚಿತ ಗುರಿ ಮತ್ತು ಸಂಯಮ ಯಶಸ್ವಿಗೆ ಭದ್ರ ಬುನಾದಿ. ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸಿ ಬದುಕಿನ ಹಿರಿಮೆ ಮತ್ತು ರಹಸ್ಯ ಬೋಧಿಸುವುದೇ ನಿಜವಾದ ಧರ್ಮ. ಸತ್ಯವೇ ಒಂದು ಧರ್ಮ. ಇದು ಧರ್ಮವನ್ನು ರಕ್ಷಿಸುವ ರಕ್ಷಾ ಕವಚ. ಧರ್ಮದ ರಕ್ಷಾ ಕವಚ ಕಳಚಿದರೆ ನಾಡಿನಲ್ಲಿ ಧರ್ಮ ಸಂಸ್ಕೃತಿ ಸಭ್ಯತೆ ಮತ್ತು ಪರಂಪರೆಯ ಆದರ್ಶಗಳು ಉಳಿಯಲಾರವು. ಧರ್ಮದ ಉತ್ಕೃಷ್ಟ ಮೌಲ್ಯಗಳನ್ನು ಪ್ರತಿಪಾದಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಮತ್ತು ಬಸವಾದಿ ಶರಣರ ವಿಚಾರ ಧಾರೆಗಳ ಪರಿಪಾಲನೆಯಿಂದ ಜಗದಲ್ಲಿ ಶಾಂತಿ ಸಾಮರಸ್ಯ ಮೂಡಿ ಬರಲು ಸಾಧ್ಯವಾಗುತ್ತದೆ. ಬಸವಕಲ್ಯಾಣದಲ್ಲಿ ನಡೆದ ದಸರಾ ನಾಡಹಬ್ಬ ಅತ್ಯಂತ ಸಂಭ್ರಮ ಸಡಗರದಿಂದ ನಡೆದಿರುವುದು ತಮ್ಮಲ್ಲಿರುವ ಧರ್ಮಶ್ರದ್ಧೆ ಮತ್ತು



ಭಕ್ತಿಯ ಶಕ್ತಿಯೇ ಕಾರಣವಾಗಿದೆ ಎಂದು ಹರುಷ ವ್ಯಕ್ತಪಡಿಸಿದ ಜಗದ್ಗುರುಗಳು ಸ್ವಧರ್ಮದಲ್ಲಿ ನಿಷ್ಠೆ ಮತ್ತು ಪರಧರ್ಮದಲ್ಲಿ ಸಹಿಷ್ಣುತಾ ಮನೋಭಾವ ಹೊಂದಿ ಬಾಳಿದರೆ ಸಕಲರಿಗೂ ಸುಖ ಶಾಂತಿ ಪ್ರಾಪ್ತವಾಗುತ್ತದೆ ಎಂದರು.

ಇಂದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿ ನಿಂತು ಶ್ರಮಿಸಿದ ಮಹಾತ್ಮ ಗಾಂಧೀಜಿ ಹಾಗೂ ಹಾಗೂ ದಕ್ಷ ಪ್ರಾಮಾಣಿಕ ಜನಪರ ಕಾಳಜಿ ಹೊಂದಿದ್ದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ. ಅವರ ಸರಳತೆ ಸಾತ್ವಿಕ ಮನೋಭಾವ ಬೆಳೆಯುವ ಯುವ ಜನಾಂಗದಲ್ಲಿ ಮತ್ತು ರಾಜಕೀಯ ಧುರೀಣರಲ್ಲಿ ಬೆಳೆದು ಬಂದರೆ ನಾಡು ನುಡಿ ಶ್ರೀಮಂತಗೊಳ್ಳುವುದರಲ್ಲಿ ಯಾವುದೇ ಸಂದೇಹ ಇಲ್ಲ ಎಂದರು.

# ಮಾನ್ವಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಆಯ್ಕೆ

ಯುವ ಮಾರ್ಗ ಸುದ್ದಿ



**ಮಾನ್ವಿ,ಅ.3–** ಮಾನ್ವಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ತಾಕಸಾಪ ಅಧ್ಯಕ್ಷ ಶರಣಬಸವ ನೀರಮಾನ್ವಿ ತಿಳಿಸಿದ್ದಾರೆ.

ಮಾನ್ವಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಶರಣಬಸವ ನೀರಮಾನ್ವಿ, ಗೌರವ ಕಾರ್ಯದರ್ಶಿಗಳಾಗಿ ಲಕ್ಷ್ಮಣ್ ಜಾನೇಕಲ್, ಜಿ.ಎಸ್. ಬಾಲಾಜಿಸಿಂಗ್ ಮಾನ್ವಿ, ಗೌರವ ಕೋಶ್ಯಾಧ್ಯಕ್ಷ ಮನೋಜ್‌ಕುಮಾರ ಮಿಶ್ರಾ, ಸಂಘಟನಾ ಕಾರ್ಯದರ್ಶಿಗಳಾಗಿ ಮಂಜುನಾಥ ಕಮತರ, ಸಬ್ಜಲಿ ಶಿಕ್ಷಕರು, ಮಹಾಂತೇಶ ಗುಜ್ಜಲ್ ಪೋತ್ನಾಳ , ಶಿವಕುಮಾರ ಜಗ್ಲಿ, ಜಗನ್ನಾಥ ಚೌಧರಿ, ಮಹಿಳಾ ಪ್ರತಿನಿಧಿಗಳಾಗಿ ಕೆ.ಲಕ್ಷ್ಮೀ ಶಿಕ್ಷಕಿ, ಅಂಬಮ್ಮ ಪ್ರತಾಪಸಿಂಗ್ , ಪರಿಶಿಷ್ಟ ಜಾತಿ ಪ್ರತಿನಿಧಿಗಳಾಗಿ ರಾಮು ಹೊಳೆಯಪ್ಪನವರ್, ಪ್ರೀತಮ್ ಕೊಡ್ಲಿ, ಪರಿಶಿಷ್ಟ ಪಂಗಡ ಪ್ರತಿನಿಧಿಯಾಗಿ ಜೆ. ಆಂಜನೇಯ್ಯನಾಯಕ ನೀರಮಾನ್ವಿ, ಹಿಂದುಳಿದ ವರ್ಗಗಳ ಪ್ರತಿನಿಧಿ ಜೆ.ಪಿ. ಅಮರೇಶ ನಿವೃತ್ತ ಶಿಕ್ಷಕರು, ಅಲ್ಪಸಂಖ್ಯಾತರ ಪ್ರತಿನಿಧಿ ಸೈಯ್ಯದ್ ಮಿನ್ಹಾಜ್ ಉಲ್ ಹಸನ್, ಸಂಘ ಸಂಸ್ಥೆಗಳ ಪ್ರತಿನಿಧಿಯಾಗಿ ಶ್ರೀಕಾಂತಪಾಟೀಲ್ ಗೂಳಿ, ತಾಲೂಕ ಶಿಕ್ಷಣಾಧಿಕಾರಿಗಳು ಪದ ನಿಮಿತ್ಯ ಚಂದ್ರಶೇಖರ ದೊಡ್ಡಮನಿ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು ಸುಜಾತ ಶ್ರೀನಿವಾಸ, ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರು ಈರಣ್ಣ ಮರ್ಲಟ್ಟಿ ಗಾಂಧೀ ಪದವಿ ಕಾಲೇಜು, ತಾಲೂಕ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಸುರೇಶ ಕುರ್ಡಿ, ತಾಲೂಕ ಘಟಕದ ಕಸಾಪ ನಿಕಟಪೂರ್ವ ಅಧ್ಯಕ್ಷ ರವಿಕುಮಾರ ಪಾಟೀಲ್ ವಕೀಲ, ಹಿರೇಕೊಟ್ನೆಕಲ್ ಹೋಬಳಿ ಘಟಕ ಅಧ್ಯಕ್ಷರಾಗಿ ಹನುಮಂತಪ್ಪ ಕೊಟ್ನೆಕಲ್ ಆಯ್ಕೆ ಮಾಡಲಾಗಿದೆ ಎಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

# ದಸರಾ ಹಬ್ಬದ ಅಂಗವಾಗಿ ಬಿ.ಗಣೇಕಲ್ 251 ಜನ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ



**ಅರಕೇರಾ,ಅ.3–** ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಪೂಜ್ಯನೀಯ ಸ್ಥಾನ ನೀಡಲಾಗಿದೆ ತಾಯಿಂದಿರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು.ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ನೈತಿಕತೆ ಮೈಗೂಡಿಸಿಕೊಂಡರೆ ಅತ್ಯುತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಬಿ.ಗಣೇಕಲ್ ಗ್ರಾಮದಲ್ಲಿನ ಸಿದ್ದಾರೂಢ ಮಠದ ಪೀಠಾಧ್ಯಕ್ಷರಾದ ಪ.ಪೂ.ಶ್ರೀ ಸೋಮೇಶರಾನಂಧ ಮಹಾಸ್ವಾಮಿಗಳು ಹೇಳಿದರು.

ಅವರು ಬಿ.ಗಣೇಕಲ್ ಗ್ರಾಮದಲ್ಲಿ ದಸರಾ ಹಬ್ಬದ ಅಂಗವಾಗಿ ಶ್ರೀ ಸಿದ್ದಾರೂಢ ಮಠದಲ್ಲಿ ಹಮ್ಮಿಕೊಂಡಿದ್ದ ಗುಡ್ಡಾಪುರಾದ ದಾನಮ್ಮ ದೇವಿಯ ಪ್ರವಚನ ಕಾರ್ಯಕ್ರಮದಲ್ಲಿ ಪ್ರವಚನ ಪಠಾಣ ಹಾಗೂ ವಿಶೇಷವಾಗಿ ಮುತ್ತೈದೆಯರಿಗೆಉಡಿ ತುಂಬುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿ ಮಹಿಳೆರಿಗೆ ಉಡಿ ತುಂಬುವ ಪದ್ದತಿ ಭಾರತೀಯ ಸಂಸ್ಕೃತಿಯ ಪ್ರತೀಕ ಇಂತಹ ಸಂಪ್ರಾದಾಯವನ್ನು ಇಂದಿಗೂ ಪಾಲಿಸಿಕೊಂಡು ಬಂದಿರುವುದು ಹೆಮ್ಮೆಯ ವಿಷಯವೆಂದರು.

ಇದೇ ಸಂದರ್ಭದಲ್ಲಿ ಶ್ರೀಸೋಮೇಶ್ವರಾನಂದ ಸ್ವಾಮಿಯವರನ್ನು ಬಿ.ಗಣೇಕಲ್ ಭಕ್ತಾಧಿಗಳು ತುಲಾಭಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು

251 ಜನ ಮುತ್ತೈದ ಮಹಿಳೆಯರಿಗೆ ಉಡಿತುಂಬಿ ಕುಪ್ಪಸ. ಎಲೆ,ಅಡಿಕೆ ಉತ್ತೂತ್ತಿ ,ಅಕ್ಕಿ ಕುಂಕಮ,ಹರಿಶಿಣ, ಹಸಿರುಬಳೆ,ಬಾಳೆಹಣ್ಣು, ಗುಲಾಬಿ ಹೂ ಆರತಿ ಮಾಡಿಸಿ ಪೂಜಾಕಾರ್ಯಕ್ರಮಗಳು ನೇರವೇರಿಸಲಾಯಿತು. ನೀಡಲಾಯಿತು.ನಂತರಭಕ್ತರಿಗೆ ಅನ್ನ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಸಂದರ್ಭದಲ್ಲಿ .ಮಾಹಾಂತಯ್ಯಸ್ವಾಮಿ, ವೀರಭದ್ರಯ್ಯಸ್ವಾಮಿ,ಪಂಚಾಕ್ಷರಯ್ಯಸ್ವಾಮಿ, ಮುದಕಣ್ಣಪೂಜಾರಿ ಗ್ರಾಮದ ಹಿರಿಯ ಮುಖಂಡರುಗಳಾದ ಶರಣಗೌಡಮಾಲಿಪಾಟೀಲ್ ರಾಚಣ್ಣ ಅಬಕಾರಿ,ಶಾಂತಪ್ಪಸಾಹುಕಾರ ಅಂಗಡಿ, ವಿರೇಶಗೌಡಮಾಲಿಪಾಟೀಲ್ ಮಹೇಶಗೌಡ ,ಶಿವಣ್ಣ ಕ್ವಾಟೆದೊರೆ,ಪ್ರಭುಸ್ವಾಮಿ, ಟಿ.ಬಸವರಾಜ,ಟಿ,ಶಿವಣ್ಣ,ಸಿದ್ದಪ್ಪದೊರೆ, ಹಂಪಣ್ಣಪಲ್ಲೇದ್ ಶಿವಕುಮಾರ ದಂಡಗುಂಡ, ಸೂಗೂರೇಶ್ವರಪ್ಪ ಬಳೆ,ಶಿವಪ್ಪ ಕುಂಬಾರ, ಹನುಮಂತ ಮಡಿವಾಳ, ಹನುಮಂತ ಹರಿಜನ,ಎಚ್ ಎಸ್ ನಾಯಕ ,ಈಶಪ್ಪಕ್ವಾಟೆ, ಅಯ್ಯಣ್ಣಕಟ್ಟಿಮನಿ, ನರಸಪ್ಪ ಕರಣ ಗಿ ಗುರುಪಾದ ಸೂಗೂರು.ಹಾಗೂ ಬಿ.ಗಣೆಕಲ್ ಗ್ರಾಮಸ್ಥರು ಸುತ್ತಮುತ್ತಲ್ಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

# ಜಿಲ್ಲಾಡಳಿತದಿಂದ ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ ಶಾಸ್ತ್ರೀಜಿ ಜಯಂತ್ಯೋತ್ಸವ

ಯುವ ಮಾರ್ಗ ಸುದ್ದಿ

**ರಾಯಚೂರು,ಅ.3–**ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಅಕ್ಟೋಬರ್ 2ರಂದು ಮಹಾತ್ಮ ಗಾಂಧೀಜಿ ಜಯಂತ್ಯುತ್ಸವ ಮತ್ತು ಲಾಲ್ ಬಹದ್ದೂರ ಶಾಸ್ತ್ರೀಜಿ ಅವರ ಜಯಂತ್ಯುತ್ಸವ ಆಚರಿಸಲಾಯಿತು.

ಜಯಂತಿ ಹಿನ್ನೆಲೆಯಲ್ಲಿ ಜಿಲ್ಲಾ ಕ್ರೀಡಾಂಗಣ ಆವರಣದಲ್ಲಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪುತ್ಥಳಿಯ ಸುತ್ತಲು ವಿದ್ಯುದೀಪಗಳು ಮತ್ತು ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿತ್ತು. ಕಲಾವಿದರಾದ ನಬೀಬೇಗ, ಮಹಾಲಕ್ಷ್ಮೀ, ವಿಜಯಕುಮಾರ, ಸುಧಾಕರ, ಮಹಮ್ಮದ್ ಅನ್ವರ್ ಮಾಡಗಿರಿ ಅವರನ್ನೊಳಗೊಂಡ ಕಲಾವಿದರ ತಂಡದವರು ಬೆಳಗ್ಗೆ 8 ಗಂಟೆಯಿಂದ ಗಾಂಧೀಜಿಯವರ ಪ್ರಿಯ ಗೀತೆಗಳನ್ನು ಪ್ರಸ್ತುತಪಡಿಸಿದರು.

ಬಳಿಕ ಕಾರ್ಯಕ್ರಮಕ್ಕೆ, ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ ಅವರು ದೀಪ ಬೆಳಗಿಸಿ ಚಾಲನೆ ನೀಡಿದರು. ನಗರಸಭೆ ಅಧ್ಯಕ್ಷರು, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಐಎಎಸ್ ಪ್ರೊಬೇಷನರಿ ಅಧಿಕಾರಿ ಪುರುರಾಜ್‌ಸಿಂಗ್ ಸೋಲಂಕಿ, ಅಪರ ಜಿಲ್ಲಾಧಿಕಾರಿ ಶಿವಾನಂದ, ತಹಸೀಲ್ದಾರ ಸುರೇಶ ವರ್ಮಾ, ಪಾಲಿಕೆಯ ಉಪ ಆಯುಕ್ತರಾದ ಸಂತೋಷರಾಣಿ ಎಂ ಹಾಗೂ ಇನ್ನಿತರರು ಮಹಾತ್ಮ ಗಾಂಧೀಜಿಯವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿದರು. ಇದೆ ವೇಳೆ, ಲಕ್ಷ್ಮೀದೇವಿ, ಸುನಿತಾ, ನಾಗೇಶ್ವರಿ, ಸಯ್ಯದ್ ಖಾದ್ರಿ ಕೆ.ಇ., ಕುಮಾರ



ವಿದ್ಯಾಸಾಗರ ಅವರು ಸರ್ವಧರ್ಮ ಪ್ರಾರ್ಥನೆ ಪ್ರಸ್ತುತಪಡಿಸಿದರು.

ಈ ವೇಳೆ ಜಿಲ್ಲಾಧಿಕಾರಿಗಳು ಮಾತನಾಡಿ, ನನ್ನ ಜೀವನವೇ ನನ್ನ ಸಂದೇಶ ಎಂದು ತಿಳಿಸಿದ ಮಹಾತ್ಮ ಗಾಂಧೀಜಿಯವರು ಅತ್ಯಂತ ಸರಳವಾಗಿ ಬದುಕಿ ಬಹುದೊಡ್ಡ ಸಾಮಾಜಿಕ ಸಂದೇಶ ನೀಡಿದರು. ಅವರು ನೀಡಿದ ರಾಜಕೀಯ, ಸಾಮಾಜಿಕ, ಆರ್ಥಿಕ ಮೌಲ್ಯಗಳು ಸದಾಕಾಲ ಪ್ರಸ್ತುತವಾಗಿವೆ ಎಂದು ತಿಳಿಸಿದರು. ರಾಯಚೂರಿನ ಚಿಂತಕರು ಮತ್ತು ವಿಮರ್ಶಕರಾದ ಪರಮೇಶ್ವರಪ್ಪ ಸಾಲಿಮಠ ಅವರು ಉಪನ್ಯಾಸ ನೀಡಿದರು.

**ಬಹುಮಾನ ವಿತರಣೆ:** ಮಹಾತ್ಮ ಗಾಂಧೀಜಿಯವರ ಜಯಂತ್ಯುತ್ಸವ ಹಿನ್ನೆಲೆಯಲ್ಲಿ ವಾರ್ತಾ ಇಲಾಖೆಯಿಂದ ನಡೆಸಿದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಇದೆ ವೇಳೆ ಬಹುಮಾನ ವಿತರಿಸಲಾಯಿತು. ಸಮಾರಂಭದಲ್ಲಿ ಭಾರತ ಸೇವಾದಳದ ವಿದ್ಯಾಸಾಗರ, ಸ್ಕೌಟ್ಸ್ ಮತ್ತು ಗೈಡ್ಸನ ಆರ್ ಎಚ್ ಸಾಗರ, ಬಿಸಿಎಂ ಅಧಿಕಾರಿ ಸುನೀತಾ ಘಟಕಾಂಬಳೆ, ಮಹಾನಗರ ಪಾಲಿಕೆಯ ಕೃಷ್ಣ ಕಟ್ಟಿಮನಿ, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಮಲ್ಲಿಕಾರ್ಜುನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿ ಡಾ.ದಂಡಪ್ಪ ಬಿರಾದಾರ ಹಾಗೂ ಇನ್ನೀತರರು ಉಪಸ್ಥಿತರಿದ್ದರು. ವಾರ್ತಾ ಇಲಾಖೆಯ ವಾರ್ತಾ ಸಹಾಯಕರಾದ ಗವಿಸಿದ್ದಪ್ಪ ಅವರು ಪ್ರಾಸ್ತಾವಿಕ ಮಾತನಾಡಿ ಸ್ವಾಗತಿಸಿದರು.

# ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿ ಸಿದ್ಧಪಡಿಸಲು ವೇಳಾಪಟ್ಟಿ ಪ್ರಕಟ: ಜಿಲ್ಲಾಧಿಕಾರಿ ನಿತೀಶ್ ಕೆ

**ರಾಯಚೂರು,ಅ.3–** ಅರ್ಹತಾ ದಿನಾಂಕ 01.11.2025ಕ್ಕೆ ಅನ್ವಯಿಸುವಂತೆ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯು ನೂತನವಾಗಿ ಸಿದ್ಧಪಡಿಸುವ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ. ದಿನಾಂಕ 12.09.2025ರ ಪತ್ರದನ್ವಯ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯು ಹೊಸದಾಗಿ ಸಿದ್ಧಪಡಿಸಲಾಗುತ್ತಿರುವುದರಿಂದ ಈ ಹಿಂದಿನ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಮತದಾರರು ಸಹ ನಮೂನೆ 19ರಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ ಎಂದು ಭಾರತ ಚುನಾವಣಾ ಆಯೋಗವು ನಿರ್ದೇಶನ ನೀಡಿದೆ. ಅದರಂತೆ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲು ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ ಎಂದು ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಅರ್ಜಿ ನಮೂನೆ 19ರಲ್ಲಿ ಅರ್ಜಿಯನ್ನು ಸ್ವೀಕರಿಸಲು 06–11–2025 ಕೊನೆಯ ದಿನಾಂಕ ಆಗಿರುತ್ತದೆ. 2025ರ ನವಂಬರ್ 25ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಹಕ್ಕು ಮತ್ತು ಆಕ್ಷೇಪಣೆಗಳಿಗೆ 2025ರ ನವಂಬರ್ 25ರಿಂದ 2025ರ ಡಿಸೆಂಬರ್ 10ರವರೆಗೆ ಕಾಲಾವಕಾಶ ನೀಡಲಾಗಿದೆ. 2025ರ ಡಿಸೆಂಬರ್ 30ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಣೆ ಮಾಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತದ ಮತದಾರರ ಪಟ್ಟಿ ಸಿದ್ಧಪಡಿಸಿಕೊಳ್ಳುವ ಕುರಿತು ಹಾಗೂ ಚುನಾವಣಾ ಪೂರ್ವ ತಯಾರಿ ಮಾಡಿಕೊಳ್ಳಲಾಗುತ್ತಿದೆ. ಕರ್ನಾಟಕ ಈಶಾನ್ಯ ಶಿಕ್ಷಕರ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಇದ್ದಲ್ಲಿ ಮತದಾರರ ನೊಂದಣಾಧಿಕಾರಿಗಳು ಹಾಗೂ ಸಹಾಯಕ ಮತದಾರರ ನೊಂದಣಾಧಿಕಾರಿಗಳ ಕಚೇರಿಯಲ್ಲಿ ಮತ್ತು ಸಂಬಂಧಪಟ್ಟ ವಿಧಾನಸಭಾ ಮತಕ್ಷೇತ್ರದ ಸಹಾಯಕ ಮತದಾರರ ನೊಂದಣಾಧಿಕಾರಿಗಳ ಕಾರ್ಯಾಲಯದಲ್ಲಿ (ಮಹಾನಗರ ಪಾಲಿಕೆ ಹಾಗೂ ತಹಸೀಲ ಕಾರ್ಯಾಲಯದಲ್ಲಿ) ನಿಗದಿಪಡಿಸಿದ ಕಾಲಮಿತಿಯೊಳಗೆ ಸಲ್ಲಿಸತಕ್ಕದ್ದು. ಅರ್ಹ ಶಿಕ್ಷಕರು ಹೆಚ್ಚಿನ ಆಸಕ್ತಿ ವಹಿಸಿ ಈ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು, ಸುಭದ್ರ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಎಲ್ಲಾ ಅರ್ಹ ಮತದಾರರಲ್ಲಿ ವಿನಂತಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

**ನೋಂದಣಾಧಿಕಾರಿಗಳ ನೇಮಕ:** ಭಾರತ ಚುನಾವಣಾ ಆಯೋಗವು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರನ್ನು ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ನೋಂದಣಾ ಧಿಕಾರಿಯನ್ನಾಗಿ ಹಾಗೂ ಈ ಚುನಾವಣಾ ಕ್ಷೇತ್ರ ವ್ಯಾಪ್ತಿಗೊಳ ಪಡುವ ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳನ್ನು, ಮಹಾನಗರ ಪಾಲಿಕೆ ಆಯುಕ್ತರು, ಹಾಗೂ ಬಳ್ಳಾರಿ, ಕಲಬುರಗಿ ವಿಭಾಗದ ಆಯಾ ಉಪ ವಿಭಾಗಕ್ಕೆ ಸಂಬಂಧಪಟ್ಟ ಎಲ್ಲಾ ಸಹಾಯಕ ಆಯುಕ್ತರು, ವಿಭಾಗದ ಎಲ್ಲಾ ಸಂಬಂಧಪಟ್ಟ ತಾಲೂಕಿನ ತಹಸೀಲ್ದಾರರನ್ನು ಸಹಾಯಕ ಮತದಾರರ ನೊಂದಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು ಮಾರ್ಗಸೂಚಿ ನೀಡಲಾಗಿದೆ. ಭಾರತದ ಪ್ರಜೆಯಾಗಿರುವ, ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಾಮಾನ್ಯ ನಿವಾಸಿಯಾಗಿರುವ ಹಾಗೂ 1ನೇ ನವೆಂಬರ್ 2025ಕ್ಕೆ ಮೊದಲ 6 ವಷಗಳ ಅವಧಿಯಲ್ಲಿ ಸೆಕೆಂಡರಿ ದರ್ಜೆಯಲ್ಲಿ ಪ್ರೌಢಶಾಲೆಗಿಂತ ಕಡಿಮೆ ಇಲ್ಲದ ನಿರ್ಧಿಷ್ಟಪಡಿಸಿದಂತಹ ರಾಜ್ಯದೊಳಗಿನ ಯಾವುದೇ ಸರ್ಕಾರದಿಂದ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಟ್ಟು ಕನಿಷ್ಠ 3 ವರ್ಷ ಬೋಧನಾ ವೃತ್ತಿಯಲ್ಲಿ ನಿರತವಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸಲು ಅರ್ಹನಾಗಿರುತ್ತಾನೆ. ಹಾಗೆ ನಿರ್ಧಿಷ್ಟಪಡಿಸಿದ ಶೈಕ್ಷಣಿಕ ಸಂಸ್ಥೆಗಳ ಪಟ್ಟಿಯು ಮೊದಲನೇ ಅನುಸೂಚಿಯಲ್ಲಿ ತಿಳಿಸಲಾದ ಅಧಿಕಾರಿಗಳ ಬಳಿ ಇರುತ್ತದೆ.

ಖುದ್ದಾಗಿ ಅಥವಾ ಅಂಚೆ ಮುಖಾಂತರ ಒಟ್ಟಾರೆಯಾಗಿ ಸಲ್ಲಿಸಿದ ಅರ್ಜಿಗಳನ್ನು ಮತದಾರರ ನೋಂದಣಾಧಿಕಾರಿಯು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗಾಗಿ ಪರಿಗಣಿಸತಕ್ಕದ್ದಲ್ಲ. ಆದರೆ ಸಂಸ್ಥೆಯ ಮುಖ್ಯಸ್ಥರು ಅವರ ಸಿಬ್ಬಂದಿಯವರ ಎಲ್ಲಾ ಅರ್ಜಿಗಳನ್ನು ಒಟ್ಟಾಗಿ ಮತದಾರರ ನೋಂದಣಾಧಿಕಾರಿಗಳಿಗೆ ಕಳುಹಿಸಬಹುದು. ಒಂದೇ ಕುಟುಂಬದ ಎಲ್ಲಾ ಸದಸ್ಯರು ನಮೂನೆ 19ರಲ್ಲಿ ಅರ್ಜಿಗಳನ್ನು ಕುಟುಂಬ ಯಾವುದಾದರೂ ಸದಸ್ಯರು ಸಲ್ಲಿಸಬಹುದು ಹಾಗೂ ಪ್ರತಿ ಸದಸ್ಯನಿಗೆ ಸಂಬಂಧಿಸಿದಂತೆ ಮೂಲ ಪ್ರಮಾಣ ಪತ್ರಗಳನ್ನು ಒದಗಿಸಿ, ಪ್ರಮಾಣ ಪತ್ರವನ್ನು ಪರಿಶೀಲಿಸಿಕೊಳ್ಳಬೇಕು.

ಅರ್ಜಿಯಲ್ಲಿನ ತಪ್ಪು ಅಥವಾ ತಪ್ಪೆಂದು ಅವನು ತಿಳಿದಿರುವ ಅಥವಾ ನಂಬುವಂತಹ ಅಥವಾ ಸತ್ಯವೆಂದು ನಂಬಲಾಗ ದಿರುವಂತಹ ಹೇಳಿಕೆಗಳನ್ನು ಅಥವಾ ಘೋಷಣೆಗಳನ್ನು ಮಾಡುವ ಯಾವುದೇ ವ್ಯಕ್ತಿಯನ್ನು ಪ್ರಜಾಪ್ರಾತಿನಿಧ್ಯ ಅಧಿನಿಯಮ 1950ರ 31ನೇ ಪ್ರಕರಣದ ಮೇರೆಗೆ ಶಿಕ್ಷೆಗೆ ಗುರಿಪಡಿಸಲಾಗುವುದೆಂಬುದನ್ನು ಗಮನಿಸತಕ್ಕದ್ದು.

ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಬಯಸುವ ಪ್ರತಿಯೊಬ್ಬರು ಅರ್ಜಿ ನಮೂನೆ 19ನ್ನು ಭರ್ತಿಮಾಡಿ ಅದರೊಂದಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ 1ನೇ ನವೆಂಬರ್ 2025ಕ್ಕೆ ಮೊದಲು 6ವರ್ಷಗಳ ಅವಧಿಯಲ್ಲಿ ಒಟ್ಟು ಕನಿಷ್ಟ 3 ವರ್ಷ ಭೋದನಾ ವೃತಿಯಲ್ಲಿ ನಿತವಾಗಿರುವ ಬಗ್ಗೆ ಶೈಕ್ಷಣಿಕ ಸಂಸ್ಥೆಗಳಿಂದ ಅನುಬಂಧ  2ರಲ್ಲಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

ಯಾವುದೇ ವ್ಯಕ್ತಿ ಅಂಚೆ ಮೂಲಕ ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳು, ಗೊತ್ತುಪಡಿಸಿದ ಅಧಿಕಾರಿಗೆ ಸಲ್ಲಿಸಿದಲ್ಲಿ ಅಂತಹ ಅರ್ಜಿದಾರರಿಗೆ ಗೊತ್ತು ಪಡಿಸಿದ ಅಧಿಕಾರಿಯು ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡುತ್ತಾರೆ. ವಿಚಾರಣೆಗೆ ಹಾಜರಾಗದೇ ಅಥವಾ ದಾಖಲೆಗಳನ್ನು ಹಾಜರುಪಡಿಸದಿದ್ದಲ್ಲಿ ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ. ಬಲ್ಕ (ಗುಚ್ಛಗಳಲ್ಲಿ) ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಆಯೋಗವು ಮುಂಬರುವ ದಿನಗಳಲ್ಲಿ ನಮೂನೆ 19ರ ಅರ್ಜಿಗಳನ್ನು ಅನುಕೂಲವಾಗುವಂತೆ ಅಳವಡಿಸಲು ಉದ್ದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

**ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ**

**9743497111 9743496111**

## ಸ್ವಯಂ ದೃಢೀಕರಣ ಮೂಲಕವೂ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಮಾಹಿತಿ ಒದಗಿಸಲು ಅವಕಾಶ

**ರಾಯಚೂರು,ಅ.3–** ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಈಗಾಗಲೇ ಆರಂಭವಾಗಿದ್ದು, ಪ್ರತಿಯೊಬ್ಬ ನಾಗರಿಕರು ತಮ್ಮ ಕುಟುಂಬದ ಸಾಮಾಜಿಕ ಹಾಗೂ ಶೈಕ್ಷಣಿಕ ಮಾಹಿತಿಯನ್ನು ಸ್ವಯಂ ಘೋಷಣೆ ಮೂಲಕವೂ ನೀಡಬಹುದಾಗಿದೆ. ಸರ್ಕಾರ ನೀಡಿದ ಸ್ವಯಂ ಘೋಷಣೆ (ಸೆಲ್ಪ ಡಿಕ್ಲರೇಷನ್) ಅರ್ಜಿ ನಮೂನೆಯಲ್ಲಿ ಸ್ವಯಂ ಬಳಕೆದಾರರ ಕೈಪಿಡಿಯಲ್ಲಿ ತಿಳಿಸಿದಂತೆ ಜಾಗರೂಕತೆಯಿಂದ ಮಾಹಿತಿ ಭರ್ತಿ ಮಾಡಬೇಕು ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬೀನ್ ಮೊಹಪಾತ್ರ ಅವರು ತಿಳಿಸಿದ್ದಾರೆ.

ವೆಬ್‌ಸೈಟ್ ಲಿಂಕ್ URL:https://ksdbcselfdeclaration.karnataka.gov.in ಮೂಲಕ ಸ್ವಯಂ ಘೋಷಣೆ ಬಳಕೆದಾರರ ಕೈಪಿಡಿ ನೋಡಬಹುದಾಗಿದೆ. ಬಳಕೆದಾರರು ಸ್ವಯಂ ಘೋಷಣೆಯೊಂದಿಗೆ ಮುಂದುವರಿಯಲು ನಾಗರಿಕ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು. ಬಳಕೆದಾರರು ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಒಟಿಪಿ ಪಡೆಯಬೇಕು. ಬಳಕೆದಾರರು ಲಾಗಿನ್ ಆಗಲು ಒಟಿಪಿ ನಮೂದಿಸಬೇಕು. ಹೊಸ ಸಮೀಕ್ಷೆಯನ್ನು ಪ್ರಾರಂಭಿಸಿ ಎಂಬುದರ ಮೇಲೆ ಕ್ಲಿಕ್ ಮಾಡಬೇಕು. ಬಳಕೆದಾರರು ತಮ್ಮ ಯುಹೆಚ್‌ಐಡಿ ಅನ್ನು ನಮೂದಿಸಿ ಮತ್ತು ವೆರಿಫೈ ಯುಎಚ್‌ಐಡಿ ಕ್ಲಿಕ್ ಮಾಡಬೇಕು. ಬಳಕೆದಾರರು ಯುಹೆಚ್‌ಐಡಿ ಹೊಂದಿಲ್ಲದಿದ್ದರೆ ಐ ಡೋಂಟ್ ಹ್ಯಾವ್ ಯುಎಚ್‌ಐಡಿ ಕ್ಲಿಕ್ ಮಾಡಿ ಎಸ್ಕಾಂ ಖಾತೆ ಐಡಿ ನಮೂದಿಸಬೇಕು. ಸಮೀಕ್ಷೆಯಲ್ಲಿ ಭಾಗವಹಿಸುವವರ ಫೋಟೋ ಕ್ಲಿಕ್ ಮಾಡಿ ಅಪ್‌ಲೋಡ್ ಮಾಡಬೇಕು. ಬಳಕೆದಾರರು ಪಡಿತರ ಚೀಟಿ ಅಥವಾ ಆಧಾರ್ ಕಾರ್ಡ್ ಆಯ್ಕೆ ಮಾಡಿಕೊಳ್ಳಬೇಕು. ಪಡಿತರ ಚೀಟಿ ಆಗಿದ್ದರೆ: ಬಳಕೆದಾರರು ತಮ್ಮ ಪಡಿತರ ಚೀಟಿ ಸಂಖ್ಯೆಯನ್ನು ನಮೂದಿಸಿ 'ಸಬ್‌ಮೀಟ್ ಆರ್‌ಸಿ ಇನ್ಫೋ ಮೇಲೆ ಕ್ಲಿಕ್ ಮಾಡಿ ನಂತರ ಮುಂದುವರಿಸಲು 'ಸಲ್ಲಿಸಿ' ಮೇಲೆ ಕ್ಲಿಕ್ ಮಾಡಬೇಕು.

ಆಧಾರ್ ಆಗಿದ್ದರೆ: ಬಳಕೆದಾರರು ಮನೆಯ ಮುಖ್ಯಸ್ಥರ ಆಧಾರ್ ಕಾರ್ಡನಲ್ಲಿರುವಂತೆ ಹೆಸರನ್ನು ನಮೂದಿಸಬೇಕು ಮತ್ತು ಆಧಾರ್ ಒಟಿಪಿ ಅನ್ನು ದೃಢೀಕರಿಸಿ ಮೇಲೆ ಕ್ಲಿಕ್ ಮಾಡಬೇಕು. ಬಳಕೆದಾರರು ಒಟಿಪಿ ಅಥವಾ ಫೇಸ್ ಕ್ಯಾಪ್ಚರ್ ಆಯ್ಕೆ ಮಾಡಬಹುದು. ಒಟಿಪಿ ಆಗಿದ್ದರೆ, ಮೊಬೈಲ್ ಸಂಖ್ಯೆಗೆ ಕಳುಹಿಸಲಾದ ಒಟಿಪಿ ಅನ್ನು ನಮೂದಿಸಬೇಕು. ಫೇಸ್ ಕ್ಯಾಪ್ಚರ್ ಆಗಿದ್ದರೆ, ಬಳಕೆದಾರರು ಸಿಇಜಿ ಫೇಸ್ ಕೆವೈಸಿ ಮೊಬೈಲ್ ಅಪ್ಲಿಕೇಶನ್‌ನೊಂದಿಗೆ ಕ್ಯೂರ್ ಕೋಡ್ ಅನ್ನು ಸ್ಕ್ಯಾನ್ ಮಾಡಬೇಕು.

ಬಳಕೆದಾರರು ಅಪ್ಲಿಕೇಶನ್ ಇರುವ ಫೋನ್‌ನ ಮೊಬೈಲ್ ಸಂಖ್ಯೆಯನ್ನು ನಮೂದಿಸಬೇಕು. ಮತ್ತು ಸ್ಕ್ಯಾನ್ ಕ್ಯೂಆರ್ ಮೇಲೆ ಕ್ಲಿಕ್ ಮಾಡಬೇಕು. ಸ್ಕ್ಯಾನ್ ಮಾಡಿದ ನಂತರ, ಬಳಕೆದಾರರು ಅಪ್ಲಿಕೇಶನ್‌ನಲ್ಲಿ ಫೇಸ್ ಕ್ಯಾಪ್ಚರ್ ಅನ್ನು ಪೂರ್ಣಗೊಳಿಸಬೇಕು. ಇ ಕೆವೈಸಿ ನಂತರ ಗೇಟ್ ಡಾಟಾ ಮೇಲೆ ಕ್ಲಿಕ್ ಮಾಡಿ ಮುಂದುವರೆಸಬೇಕು. ಮನೆಯ ಮುಖ್ಯಸ್ಥರ ಇ ಕೆವೈಸಿ ನಚಿತರ ಬಳಕೆದಾರರು ಕುಟುಂಬದ ಸದಸ್ಯರನ್ನು ಸೇರಿಸಬೇಕು. ಸದಸ್ಯರನ್ನು ಸೇರಿಸಲು, ಸದಸ್ಯರನ್ನು ಸೇರಿಸಿ ಮೇಲೆ ಕ್ಲಿಕ್ ಮಾಡಿ ಮತ್ತು ಸದಸ್ಯರ ಇ–ಕೆವೈಸಿಯನ್ನ ಪೂರ್ಣಗೊಳಿಸಬೇಕು. ಸದಸ್ಯರ ಮಾಹಿತಿಯನ್ನು ಪಡಿತರ ಚೀಟಿಯಿಂದ ಪಡೆಯಲಾಗಿದ್ದರೆ ಮತ್ತು ಯಾವುದೇ ಸದಸ್ಯರು ಜೀವಂತವಾಗಿಲ್ಲದಿದ್ದರೆ, ಸದಸ್ಯರನ್ನು ಮೃತ ಎಂದು ಗುರುತಿಸಬೇಕು. ಮೃತ ಮೇಲೆ ಕ್ಲಿಕ್ ಮಾಡಿ ಖಚಿತ ಪಡಿಸಬೇಕು. ಎಲ್ಲಾ ಕುಟುಂಬದ ಸದಸ್ಯರನ್ನು ಸೇರಿಸಿದ ನಂತರ, ಮನೆಯ ಮುಖ್ಯಸ್ಥರನ್ನು ಆಯ್ಕೆಮಾಡಿ, ಮೊಬೈಲ್ ಸಂಖ್ಯೆ ಮತ್ತು ಓಟಿಪಿ ನಮೂದಿಸಿ ಸಮೀಕ್ಷೆಯನ್ನು ಪ್ರಾರಂಭಿಸಬೇಕು. ಬಳಕೆದಾರರು ಎಲ್ಲಾ ಸದಸ್ಯರಿಗೆ ವೈಯಕ್ತಿಕ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು ಮತ್ತು ನಂತರ ಕುಟುಂಬದ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು.

ವೈಯಕ್ತಿಕ ಸಮೀಕ್ಷೆಗಾಗಿ ಮಾದರಿ ಪ್ರಶ್ನೆಗಳು ಇರುವುದನ್ನು ಗಮನಿಸಬೇಕು. ಉಪ–ಜಾತಿ ಮತ್ತು ಜಾತಿಯ ಸಮಾನಾರ್ಥಕ ಹೆಸರುಗಳು ಐಚ್ಚಿಕ ಕ್ಷೇತ್ರಗಳಾಗಿವೆ. ಪ್ರಶ್ನಾವಳಿಯನ್ನು ಪೂರ್ಣಗೊಳಿಸಿದ ನಂತರ, ಸಲ್ಲಿಸಿ ಕ್ಲಿಕ್ ಮಾಡಬೇಕು. ಬಳಕೆದಾರರು ಸಮೀಕ್ಷೆಯನ್ನು ಸಲ್ಲಿಸುವ ಮೊದಲು ಅದರ ಪೂರ್ವವೀಕ್ಷಣೆಯನ್ನು ನೋಡಬಹುದು. ಬಳಕೆದಾರರು ಸ್ವಯಂ ಘೋಷಣೆ ದಾಖಲೆಯ ಫೋಟೋವನ್ನು ಕ್ಲಿಕ್ ಮಾಡಿ ಅಪ್‌ಲೋಡ್ ಮಾಡಬೇಕು. ಸಲ್ಲಿಸಿದ ನಂತರ, ಬಳಕೆದಾರರಿಗೆ ಅಪ್ಲಿಕೇಶನ್ ಸಂಖ್ಯೆ ಸಿಗುತ್ತದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಗಳನ್ನು ಕೊಂದು ತಾಯಿ ಆತ್ಮಹತ್ಯೆ

**ಶಿವಮೊಗ್ಗ,ಅ.3–** ನಗರದ ಮೆಗ್ಗಾನ್ ಆಸ್ಪತ್ರೆಯ ನರ್ಸಿಂಗ್ ಕ್ವಾಟ್ರಸ್‌ನಲ್ಲಿ ಮಗಳನ್ನು ಕೊಂದ ತಾಯಿ ಆತ್ಮಹತ್ಯೆಗೆ ಶರಣಾಗಿರುವ ದಾರುಣ ಘಟನೆ ನಡೆದಿದೆ.

6ನೇ ತರಗತಿ ಓದುತ್ತಿದ್ದ ಬಾಲಕಿ ಪೂರ್ವಿಕಾಳನ್ನು ಕೊಲೆಗೈದ ತಾಯಿ ಶೃತಿ (38) ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಶೃತಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು, ಮೆಗ್ಗಾನ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಅವರ ಪತಿ ರಾಮಣ್ಣ ನಿನ್ನೆ ರಾತ್ರಿ ಪಾಳಯದ ಕರ್ತವ್ಯದಲ್ಲಿದ್ದರು.ಮನೆಯಲ್ಲಿ ಯಾರೂ ಇಲ್ಲದ ಸಮಯ ನೋಡಿದ ಶೃತಿ ಮೊದಲಿಗೆ ಮಗಳನ್ನು ಮಚ್ಚಿನಿಂದ ಹೊಡೆದು ಕೊಂದಿದ್ದಾಳೆ. ಬಳಿಕ ಆಕೆಯ ಮೃತದೇಹದ ಮೇಲೆ ನಿಂತುಕೊಂಡ ಫ್ಯಾನ್‌ಗೆ ನೇಣುಬಿಗಿದುಕೊಂಡು ಅತ್ಮಹತ್ಯೆ ಮಾಡಿಕೊಂಡಿದ್ದಾಳೆ.ಪತಿ ರಾತ್ರಿ ಕೆಲಸ ಮುಗಿಸಿಕೊಂಡು ಬೆಳಗ್ಗೆ ಕ್ವಾಟ್ರಸ್‌ಗೆ ಬಂದಾಗ ವಿಷಯ ತಿಳಿದಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H